ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME-ಸಂಪುಟ:12 | ISSUE- ಸಂಚಿಕೆ: 348 | PAGE- ಪುಟ 8 | ಭಾನುವಾರ 19.01.2025 ಬೀದರ | RNI NO:KARKAN/2011/48371 | RS.ಬೆಲೆ 2/–

# ವಸ್ತುಸ್ಥಿತಿ ಜೊತೆಗೆ ಮೌಲ್ಯಧಾರಿತ ಸುದ್ದಿ ಇಂದಿನ ಅಗತ್ಯ:

## ಕಲ್ಪಿತ ಪತ್ರಿಕೋದ್ಯಮ ಅಪಾಯಕಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಮಲ್ಲಮ್ಮ ನುಡಿ ವಾರ್ತೆ

ತುಮಕೂರು:ಜ.18:ವರದಿಗಾರಿಕೆ ವೃತ್ತಿಪರವಾಗಿದ್ದಾಗ ಸಮಾಜದ ಪರವಾಗಿರುತ್ತದೆ. ಪತ್ರಿಕಾ ವೃತ್ತಿ ಉದ್ಯಮ ಆದ ಕೂಡಲೇ ಇದರ ಉದ್ದೇಶಗಳು ಬದಲಾಗುತ್ತವೆ. ವಸ್ತು ಸ್ಥಿತಿ ಜೊತೆಗೆ ಮೌಲ್ಯಧಾರಿತ ಸುದ್ದಿ ಇಂದಿನ ಅಗತ್ಯ. ಊಹಾ (ಕಲ್ಪಿತ) ಪತ್ರಿಕೋದ್ಯಮ ಅಪಾಯಕಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘ ತುಮಕೂರು ಸಿದ್ಧಾರ್ಥ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಜ್ಯ ಪತ್ರಕರ್ತರ 39ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಂವಿಧಾನದ ಆಶಯಗಳನ್ನು ಈಡೇರಿಸುವುದೇ ಮಾಧ್ಯಮಗಳ ಕರ್ತವ್ಯ. ಧ್ವನಿ ಇಲ್ಲದವರ ಪರವಾಗಿ ಧ್ವನಿ ಎತ್ತಿ ಸಮಾಜಕ್ಕೆ ಅನುಕೂಲ ಮಾಡಬೇಕು. ಸಮಾಜದಲ್ಲಿರುವ ಮೇಲು, ಕೀಳು ಜಾತಿಗಳ ನಡುವಿನ ತಾರತಮ್ಯ ಮತ್ತು ಅಸಮಾನತೆ ಕೊನೆಯಾಗುವ ದಿಕ್ಕಿನಲ್ಲಿ ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು.



ನಿಮ್ಮ ವಿಶೇಷ ಸಂಚಿಕೆ ನೀವೂ ಓದಿ:ಈಗ ವೇದಿಕೆಯಲ್ಲಿ ಬಿಡುಗಡೆಯಾದ ನಿಮ್ಮದೇ ವಿಶೇಷ ಸಂಚಿಕೆ ನೀವೂ ಓದಿ. ಪತ್ರಕರ್ತರ ಕರ್ತವ್ಯ,ಸವಾಲುಗಳ ಪಟ್ಟಿ ಇದೆ. ಅದನ್ನು ಓದಿ, ಪಾಲಿಸಿ ಎಂದರು.

ಜನ ಪತ್ರಕರ್ತರ ಮೇಲೆ ನಂಬಿಕೆ ಇಟ್ಟಿದ್ದಾರೆ. ಮೌಢ್ಯದ ಸುದ್ದಿಗಳನ್ನು, ಚರ್ಚೆಗಳನ್ನು ನಡೆಸಿ ನೋಡುಗರ, ಓದುಗರ ದಾರಿ ತಪ್ಪಿಸಬಾರದು. ವಿಜ್ಞಾನ, ತಂತ್ರಜ್ಞಾನದ ವೇಗದಲ್ಲೇ ಪತ್ರಿಕೋದ್ಯಮ ಬೆಳೆಯುತ್ತಿದೆ. ಇದು ಅವಕಾಶ, ಸವಾಲು ಎರಡೂ ಆಗಿದೆ ಎಂದರು.

ದೇಶದ ಪ್ರತಿಯೊಬ್ಬರೂ ಸಂವಿಧಾನ ಓದಬೇಕು. ಆಗ ಹಕ್ಕು-ಕರ್ತವ್ಯ ಎರಡೂ ಗೊತ್ತಾಗುತ್ತದೆ. ನಿಮ್ಮದು ಶಕ್ತಿಯುತ ಮಾಧ್ಯಮ. ಜನ ನಿಮ್ಮ ಕಡೆ ನೋಡ್ತಾ ಇದ್ದಾರೆ. ಈ ಎಚ್ಚರಿಕೆ ಸದಾ ಇರಲಿ ಎಂದರು.

ಗ್ರಾಮೀಣ ಪತ್ರಕರ್ತರ ಉಚಿತ ಬ???ಪಾಸ್ ಸದ್ಯದಲ್ಲೇ ನಿಮ್ಮ ಕೈ ಸೇರಲಿದೆ, ಪತ್ರಕರ್ತರ ಕುಟುಂಬಕ್ಕೆ ಆರೋಗ್ಯ ವಿಮೆ ನೀಡುವ ಬಗ್ಗೆ ತೀರ್ಮಾನ

## ಗಣರಾಜ್ಯೋತ್ಸವಕ್ಕೆ ವಿಶೇಷ ಅತಿಥಿಯಾದ ಕಿನ್ನಾಳ ಗ್ರಾಪಂ ಅಧ್ಯಕ್ಷೆ ಶ್ವೇತಾ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.18:ಇದೇ ಜನವರಿ 26 ರಂದು ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳನ್ನಾಗಿ ದೇಶಾದ್ಯಂತ ಒಟ್ಟು 750 ಸ್ಥಳೀಯ ಆಡಳಿತದ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ.ಈ ಪೈಕಿ

(2ನೇ ಪುಟ ನೋಡಿ)

## ನಿಮ್ಮಪ್ಪನ ಸಿಎಂ ಮಾಡಲು ಶಾಸಕ ಸ್ಥಾನ ತ್ಯಾಗ ಮಾಡಿದ್ದೆ:ವಿಜಯೇಂದ್ರಗೆ ಜಾರಕಿಹೊಳಿ ತಿರುಗೇಟು

ಬೆಳಗಾವಿ:ಜ.18: ರಾಜ್ಯ ಬಿಜೆಪಿಯಲ್ಲಿ ಬಣ ರಾಜಕೀಯ ಮತ್ತೆ ತೀವ್ರಸ್ವರೂಪ ಪಡೆದು- ಕೊಂಡಿದ್ದು, ನಿಮ್ಮಪ್ಪನ ಮುಖ್ಯಮಂತ್ರಿ ಮಾಡಲು ನಾನು ಶಾಸಕ ಸ್ಥಾನ ತ್ಯಾಗ ಮಾಡಿದ್ದೆ ಎಂದು ಶನಿವಾರ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅವರು ನಾಲಿಗೆ ಬಿಗಿ ಹಿಡಿದು ಮಾತಾಡಿ ಎಂದಿದ್ದ ಬಿಜೆಪಿ ರಾಜ್ಯಾಧ್ಯಕ್ಷ

(2ನೇ ಪುಟ ನೋಡಿ)




## ರೈತರು ಸಾವಯವ ಕೃಷಿಗೆ ಒತ್ತು ನೀಡಬೇಕು : ರಾಘವೇಂದ್ರ ಹಿಟ್ನಾಳ್



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.18: ಇತ್ತೀಚೆಗೆ ಸಿರಿಧಾನ್ಯಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ರೈತರು ಸಾವಯವ ಬೆಳೆಗಳನ್ನು ಬೆಳೆಯಲು ಒತ್ತು ನೀಡಬೇಕು ಮತ್ತು ಇದ-ಕ್ಕೆ ಕೃಷಿ ಇಲಾಖೆಯವರು ಪ್ರೋತ್ಸಾಹ ನೀಡಬೇಕೆಂದು ಕೊಪ್ಪಳ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಶನಿವಾರ ಜಿಲ್ಲಾಡಳಿತ. ಜಿಲ್ಲಾ ಪಂಚಾಯತ. ಕೃಷಿ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ ಕೊಪ್ಪಳ ನಗರದ ಮಧುಶ್ರೀ ಗಾರ್ಡನಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾಮಟ್ಟದ ಸಾವಯವ ಮತ್ತು ಸಿರಿಧಾನ್ಯ ಮೇಳ ಕಾರ್ಯಕ್ರಮವನ್ನು

(2ನೇ ಪುಟ ನೋಡಿ)



ಹುಮನಾಬಾದ್ : ಶ್ರೀ ವೀರಭದ್ರೇಶ್ವರ ಪಲ್ಲಕ್ಕಿ ಉತ್ಸವಕ್ಕೆ, ಆರಾಧ್ಯರಡ್ಡಿ, ನವಿಕಾ, ಧಾನೇಶ್ವರಿ. ಹಾಗೂ ಸಾನ್ವಿರಡ್ಡಿ ರವರು ರಂಗೋಲಿ ಬಿತ್ತರಿಸಿರುವುದನ್ನು ಕಾಣಬಹುದು.

## ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಅಗತ್ಯ : ಎನ್.ಗಂಗಿರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಜ.18: ಆಂಧ್ರಪ್ರದೇಶ ತೆಲಂಗಾಣವಾಗಿ ಮಾರ್ಪಟ್ಟು ಎರಡು ರಾಜ್ಯಗಳಾಗಿವೆ. ಕೇಂದ್ರ ಸರ್ಕಾರದಿಂದ ಮತ್ತು ಬೇರೆಯಾದ ರಾಜ್ಯಗಳಿಂದ ಬೊಕ್ಕಸಕ್ಕೆ ಸಾಕಷ್ಟು ಅನುದಾನ ಬರುವುದರಿಂದ ಅಭಿವೃದ್ಧಿ ಕೆಲಸಗಳು ನಡೆಯುತ್ತವೆ. ಹೀಗಾಗಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಆದರೆ ಅಭಿವೃದ್ಧಿ ಕೆಲಸಗಳಿಗೆ ಅನುಕೂಲವಾಗುತ್ತದೆ. ಎಲ್ಲ ರಾಜಕಾರಣಿಗಳು ಈ ಧ್ವನಿಗೆ ಬೆಂಬಲಿಸಬೇಕೆಂದು ಅಖಿಲ ಭಾರತ ಜನಗಣ ಒಕ್ಕೂಟದ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷರು ಹಾಗೂ ನಗರಸಭೆ ಮಾಜಿ ಸದಸ್ಯರಾದ ಎನ್.ಗಂಗಿರೆಡ್ಡಿ ಅವರು ಮನವಿ ಮಾಡಿದ್ದಾರೆ.

ಸ್ನೇಹ ಸಂಪುಟದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವನ್ನಾಗಿಸಿ 13 ಜಿಲ್ಲೆಗಳನ್ನು ಸೇರಿಸಬೇಕು.

(2ನೇ ಪುಟ ನೋಡಿ)

# ಒಂದನೇ ಪುಟದಿಂದ

## ಪ್ರತ್ಯೇಕ ರಾಜ್ಯ ಅಗತ್ಯ : ಎನ್.ಗಂಗಿರೆಡ್ಡಿ

ಈ ಭಾಗದಲ್ಲಿರುವ 13 ಜಿಲ್ಲೆಗಳ ಹಾಲಿ ಮತ್ತು ಮಾಜಿಗಳು, ಪಾರ್ಲಿಮೆಂಟ್ ಸದಸ್ಯರು, ಎಂ.ಎಲ್.ಎ., ಎಂ.ಎಲ್.ಸಿ. ಮತ್ತು ಎಲ್ಲ ಸಂಘ ಸಂಸ್ಥೆಗಳು, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯಕ್ಕಾಗಿ ಬೆಂಬಲ ನೀಡಬೇಕೆಂದು ಕೋರಿದರು.

ಉತ್ತರ ಕರ್ನಾಟದಲ್ಲಿರುವ 6 ಜಿಲ್ಲೆಗಳು ಮತ್ತು ಬಾಂಬೆ ಕರ್ನಾಟಕದಲ್ಲಿರುವ 7 ಜಿಲ್ಲೆಗಳು ಸೇರಿ ಒಟ್ಟು 13 ಜಿಲ್ಲೆಗಳು ಆಗುತ್ತವೆ. ಸ್ವತಂತ್ರ ಬಂದಾಗಿನಿಂದ ಈ ಭಾಗದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಣುತ್ತಿಲ್ಲ. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಇದ್ದಾಗ ಆಂಧ್ರಪ್ರದೇಶವನ್ನು ತೆಲಂಗಾಣ ರಾಜ್ಯವನ್ನಾಗಿಸಿ ವಿಭಜನೆಯಾಯಿತು. ಯು.ಪಿ.ಎ.ಸರ್ಕಾರದಲ್ಲಿ ವಿರೋದ ಪಕ್ಷದ ನಾಯಕಿಯಾಗಿದ್ದ ಸುಷ್ಮಾ ಸ್ವರಾಜ್ ಕೂಡ ತೆಲಂಗಾಣ ವಿಭಜನೆಗೆ ಬೆಂಬಲ ವ್ಯಕ್ತಪಡಿಸಿದ್ದರು. ಆ ವೇಳೆ ಗಲಾಟೆ ಆದರೂ ಕೊನೆಗೆ ಪ್ರತ್ಯೇಕ ರಾಜ್ಯಗಳ ಉದಯವಾಯಿತು.

ಆವೇಳೆ ವಿರೋಧ ಪಕ್ಷದಲ್ಲಿರುವ ಎನ್.ಡಿ.ಎ. ಸರ್ಕಾರ ವಿಭಜನೆ ಆಗಬೇಕೆಂದು ಬೆಂಬಲ ನೀಡಿತ್ತು. ಸುಷ್ಮಾ ಸ್ವರಾಜ್ ರವರು ಚಿಕ್ಕ ಚಿಕ್ಕ ರಾಜ್ಯಗಳಾದರೆ ಅಭಿವೃದ್ಧಿ ಆಗುತ್ತವೆ ಎಂದು ಸಂಸತ್ ನಲ್ಲಿ ಸಮರ್ಥಿಸಿಕೊಂಡಿದ್ದರು. ಎಲ್ಲರ ಒಪ್ಪಿಗೆಯಿಂದ ತೆಲಂಗಾಣ ಪ್ರತ್ಯೇಕ ರಾಜ್ಯಕ್ಕಾಗಿ ಯು.ಪಿ.ಎ. ಸರ್ಕಾರ ಒಪ್ಪಿ ಕೊಂಡಿತು. ಅದೇ ಸಂದರ್ಭದಲ್ಲಿ ಆಂಧ್ರಪ್ರದೇಶ ವಿಭಜನೆಯಾಯಿತು. ಕರ್ನಾಟಕದಲ್ಲೂ ಸಹ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕು. ಅವತ್ತಿನ ಹೈದ್ರಾಬಾದ್–ಕರ್ನಾಟಕ, ಬಾಂಬೆ ಕರ್ನಾಟಕ, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಬೇಕು ಎಂದು ಒತ್ತಾಯಿಸಿದ್ದೆವು. 2010 ರಲ್ಲಿ ಅಖಿಲ ಭಾರತ ಜನಗಣ ಒಕ್ಕೂಟದಿಂದ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆನ್ನುವ ಕೂಗು ಕೇವಲ ಅಭಿವೃದ್ಧಿಯ ಹಿತದೃಷ್ಟಿಯಿಂದ ಎನ್ನುವುದನ್ನು ಎಲ್ಲ ರಾಜಕೀಯ ನೇತಾರರು ಮನಗಾಣಬೇಕೆಂದು ಹೇಳಿದರು.

## ಕಲ್ಪಿತ ಪತ್ರಿಕೋದ್ಯಮ ಅಪಾಯಕಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಮಾಡಲಾಗುವುದು. ಪತ್ರಕರ್ತರ ಮಾಸಾಶನವನ್ನು 12 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದರು.

ಮೊದಲಿಗೆ ಸಮ್ಮೇಳನದ ಆವರಣದಲ್ಲಿ ಆಯೋಜಿಸಿದ್ದ ಸ್ಟಾಲ್‌ಗಳನ್ನು ವೀಕ್ಷಿಸಿದ ಮುಖ್ಯಮಂತ್ರಿಗಳು ಮಹಿಳಾ ಸ್ವ ಸಹಾಯ ಸಂಘಗಳು ಸಿದ್ದಪಡಿಸಿದ ತಿಂಡಿ ಸವಿದರು.

ಕೆ.ವಿ.ಪ್ರಭಾಕರ್ ಅವರಿಗೆ ಅಭಿನಂಧಿಸಿದ ಸಮ್ಮೇಳನ:

ರಾಜ್ಯದ ಪತ್ರಕರ್ತ ಸಮುದಾಯದ ವೃತ್ತಿಪರ ಸಮಸ್ಯೆಗಳಿಗೆ ಅತ್ಯಂತ ಸಹೃದಯತೆಯಿಂದ ಸ್ಪಂದಿಸಿ, ಪರಿಹಾರ ಒದಗಿಸಿಕೊಡುತ್ತಿರುವುದರ ಜೊತೆಗೆ ಸಮ್ಮೇಳನದ ಯಶಸ್ಸಿಗೆ ಸಕಲ ರೀತಿಯಲ್ಲಿ ಸಂಪೂರ್ಣ ಸಹಕಾರ ನೀಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೆ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಸಮ್ಮೇಳನ ವಿಶೇಷ ಅಭಿನಂದನೆ ಸಲ್ಲಿಸಿತು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಗೃಹ ಸಚಿವ ಜಿ.ಪರಮೇಶ್ವರ್, ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿ ಜಿಲ್ಲೆಯ ಶಾಸಕರುಗಳು ಹಾಗೂ ಹಲವು ಪ್ರಮುಖರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೃಷಿಗೆ ಒತ್ತು ನೀಡಬೇಕು : ರಾಘವೇಂದ್ರ ಹಿಟ್ನಾಳ್

ಉದ್ಘಾಟಿಸಿ ಮಾತನಾಡಿದರು.

ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಮಾತನಾಡಿ, ಕೃಷಿ ಇಲಾಖೆಯು ಸಿರಿಧಾನ್ಯ ಮೇಳ ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಂಡಿದೆ. ನಾನು ರೈತನ ಮಗ ಆಗಿರುವುದರಿಂದ ರೈತರ ಕಷ್ಟ ನನಗೂ ಗೊತ್ತಿದೆ. ರೈತ ನಮ್ಮ ಅನ್ನದಾತ ಅವನಿಲ್ಲದಿದ್ದರೆ ನಮ್ಮ ಜೀವನ ಇಲ್ಲ. ರೈತರಿಗೆ ಕೃಷಿಯ ಬಗ್ಗೆ ಮಾಹಿತಿ ನೀಡುವ ಹಲವಾರು ಕಾರ್ಯಕ್ರಮಗಳನ್ನು ತಮ್ಮ ಇಲಾಖೆಯಿಂದ ಆಯೋಜನೆ ಮಾಡಬೇಕೆಂದು ಹೇಳಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜನರಲ್ಲಿ ಸಿರಿಧಾನ್ಯಗಳ ಬಗ್ಗೆ ಅರಿವು ಮೂಡಿಸಲು ಕೃಷಿ ಇಲಾಖೆಯಿಂದ ಪ್ರತಿ ಜಿಲ್ಲೆಯಲ್ಲಿ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯ ಮೇಳದಲ್ಲಿ ಗುಣಮಟ್ಟದ ವಸ್ತು ಪ್ರದರ್ಶನಗಳು, ಉತ್ಪಾದಕರ–ಮಾರುಕಟ್ಟೆದಾರರ ಸಭೆಗಳು, ಸಾವಯವ ಆಹಾರ ಮಳಿಗೆಗಳು ಮತ್ತು ಬಳಕೆದಾರರೊಂದಿಗೆ ಸಂಪರ್ಕ, ಈ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತಿದೆ. ಸಾವಯವ ಕೃಷಿಯ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗಿದ್ದು, ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯ ಸರ್ಕಾರವು ಜನವರಿ 23 ರಿಂದ 25 ರವರೆಗೆ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳುತ್ತಿದ್ದು, ಇದರಲ್ಲಿ ಇತರೆ 10 ದೇಶಗಳು ಹಾಗೂ ನಮ್ಮ ದೇಶದ 20 ರಾಜ್ಯಗಳ ರೈತರು ಸೇರಿದಂತೆ ಹಲವಾರು ಜನರು ಭಾಗವಹಿಸುತ್ತಿದ್ದಾರೆ ಎಂದರು.

ಕೈಪಿಡಿ ಬಿಡುಗಡೆ: 'ಸಿರಿಧಾನ್ಯಗಳ ಅಧಿಕ ಉತ್ಪಾದನೆಗೆ ಸುಧಾರಿತ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧನೆ' ಕುರಿತ ಕೃಷಿ ಇಲಾಖೆಯಿಂದ ಸಿದ್ದಪಡಿಸಲಾದ ಕೈಪಿಡಿಯನ್ನು ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು.

ಗಮನ ಸೆಳೆದ ಪ್ರದರ್ಶನ ಮಳಿಗೆಗಳು: ಸಾವಯವ ಮತ್ತು ಸಿರಿಧಾನ್ಯ ಮೇಳ ಕಾರ್ಯಕ್ರಮದ ನಿಮಿತ್ತ ಸಿರಿಧಾನ್ಯಗಳು ಮತ್ತು ಅವುಗಳಿಂದ ತಯಾರಿಸಲ್ಪಟ್ಟ ಖಾದ್ಯಗಳು ಹಾಗೂ ಸಾವಯವ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳು ಸಾರ್ವಜನಿಕರ ಗಮನ ಸೆಳೆದವು. ಇದರ ಜೊತೆಗೆ ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಪ್ರದರ್ಶನಕ್ಕಿರಿ ಅವುಗಳ ಖರೀದಿಗಾಗಿ ರೈತರಿಗೆ ಇರುವ ಸಹಾಯಧನ ಸೌಲಭ್ಯಗಳ ಮಾಹಿತಿಯನ್ನು ಸಹ ನೀಡಲಾಯಿತು. ರೈತ ಹಾಗೂ ರೈತ ಮಹಿಳೆಯರ ಉಡುಪುಗಳನ್ನು ಧರಿಸಿದ ಬಾಲ ಪ್ರತಿಭೆಗಳು ಕಾರ್ಯಕ್ರಮದಲ್ಲಿ ನೋಡುಗರ ವಿಶೇಷ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ರಾಮ್ ಎಲ್ ಅರಸಿದ್ದಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ, ಪಶು ಇಲಾಖೆ ಉಪನಿರ್ದೇಶಕ ಡಾ. ಪಿ.ಎಂ.ಮಲ್ಲಯ್ಯ, ಗಂಗಾವತಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ರಾಘವೇಂದ್ರ ಎಲಿಗಾರ, ರಾಯಚೂರಿನ ಕೃಷಿ ವಿಶ್ವ ವಿದ್ಯಾಲಯದ ಆಡಳಿತ ಮಂಡಳಿ ಸದಸ್ಯ ತಿಮ್ಮಣ್ಣ ಚೌಡಿ, ಕೊಪ್ಪಳ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಸಣ್ಣ ಹನುಮಪ್ಪ ಹಳ್ಳಿ, ಮಾಜಿ ಜಿ.ಪಂ ಸದಸ್ಯರಾದ ರಾಮಣ್ಣ ಚೌಡಕಿ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ ರೈತರು, ಕೃಷಿ ಸಖಿಯರು, ಸಹಾಯಕ ಕೃಷಿ ಸಖಿಯರು ಸೇರಿದಂತೆ ಕೃಷಿ ಇಲಾಖೆಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಕಿನ್ನಾಳ ಗ್ರಾಪಂ ಅಧ್ಯಕ್ಷೆ ಶ್ವೇತಾ

ಕರ್ನಾಟಕ 12 ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸುದೈವ ಒದಗಿ ಬಂದಿದೆ. ಅದರಲ್ಲಿ ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮ ಪಂಚಾಯತಿಯ ಅಧ್ಯಕ್ಷೆ ಕೂಡಾ ಒಬ್ಬರಾಗಿದ್ದಾರೆ. ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ವೇತಾ ರಾಘವೇಂದ್ರ ಡಂಬಳ ಆಯ್ಕೆ ಯಾಗಿದ್ದಾರೆ.

ಗ್ರಾಮ ಪಂಚಾಯತ ಅಧ್ಯಕ್ಷೆ, ಅಧ್ಯಕ್ಷರ ಜೊತೆ ಅವರ ಪತಿ, ಪತ್ನಿಯನ್ನು ಕೂಡಾ ಕರೆದುಕೊಂಡು ಹೋಗಲು ಅವಕಾಶವಿದೆ. ಈ ಬಗ್ಗೆ ರಾಜ್ಯದ ಗ್ರಾಮೀಣಾಭಿವೃದ್ಧಿ ಇಲಾಖೆಯ ನಿರ್ದೇಶಕರು, ಆಯ್ಕೆಯಾಗಿರುವ ಜಿಲ್ಲೆಯ ಜಿಲ್ಲಾ ಪಂಚಾಯತ್ ಸಿಇಓ ಗಳಿಗೆ ಪತ್ರ ಬರೆದಿದ್ದು, ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಹೋಗುವ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಅವರ ಕುಟುಂಬದ ಓರ್ವರಿಗೆ ಹೋಗಿ ಬರಲು ಮತ್ತು ತಂಗಲು ವ್ಯವಸ್ಥೆ ಕಲ್ಪಿಸಲು ಸೂಚನೆ ನೀಡಿದ್ದಾರೆ.

ಕೊಪ್ಪಳ ತಾಲೂಕಿನ ಕಿನ್ನಾಳ ರಾಜ್ಯದ ಮಹಿಳಾ ಸ್ನೇಹಿ ಗ್ರಾಮ ಪಂಚಾಯತ್ ಎಂಬ ಹೆಗ್ಗಳಿಕೆ ಹೊಂದಿದೆ. ಗ್ರಾಮ ಪಂಚಾಯತ್ ಅನೇಕ ಯೋಜನೆಗಳನ್ನು ಮಹಿಳೆಯರಿಗೆ ತಲುಪಿಸುವುದು, ಸಾಮಾನ್ಯ ಸಭೆಯಲ್ಲಿ ಮಹಿಳೆಯರ ಬಾಗವಹಿಸುವಿಕೆಯಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಂಚಾಯತ್ ಪುರಸ್ಕಾರವನ್ನು ಕಳೆದ ತಿಂಗಳು ರಾಷ್ಟಪತಿಗಳು ಕಿನ್ನಾಳ ಗ್ರಾಮ ಪಂಚಾಯತ್ ಗೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಕಿನ್ನಾಳ ಗ್ರಾಮ ಪಂಚಾಯತ್ ಅಧ್ಯಕ್ಷೆಯನ್ನು ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅತಿಥಿಯನ್ನಾಗಿ ಆಹ್ವಾನಿಸಲಾಗಿದೆ.

ಇದೇ ರೀತಿ ಸರ್ಕಾರದ ಯೋಜನೆಗಳನ್ನು ಗಮನಾರ್ಹವಾಗಿ ಜಾರಿಗೊಳಿಸಿದ ಹನ್ನೆರಡು ಗ್ರಾಮ ಪಂಚಾಯತ್ ಅಧ್ಯಕ್ಷರುಗಳನ್ನು ಆಹ್ವಾನಿಸಲಾಗಿದೆ.

## ವಿಜಯೇಂದ್ರಗೆ ಜಾರಕಿಹೊಳಿ ತಿರುಗೇಟು

ಬಿವೈ ವಿಜಯೇಂದ್ರ ಅವರಿಗೆ ತಿರುಗೇಟು ನೀಡಿದ್ದಾರೆ.

ಇಂದು ಬೆಳಗಾವಿ ಜಿಲ್ಲೆಯ ಅಂಕಲಗಿ ಗ್ರಾಮದಲ್ಲಿ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತಾಡಿದ ರಮೇಶ್ ಜಾರಕಿಹೊಳಿ, ನಾನು ನಿಮ್ಮಪ್ಪನ್ನೇ ಸಿಎಂ ಮಾಡೋದಕ್ಕೆ ಬಿಜೆಪಿಗೆ ಬಂದಿದ್ದು ವಿಜಯೇಂದ್ರಾ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ವಿಜಯೇಂದ್ರ ನೀನು ಇನ್ನೂ ಬಚ್ಚಾ ಇದ್ದೀಯಾ ರಾಜ್ಯಾಧ್ಯಕ್ಷ ಆಗೋದಕ್ಕೆ ನೀನಗೆ ಯೋಗ್ಯತೆಯಿಲ್ಲ. ಯಡಿಯೂರಪ್ಪ ಬಗ್ಗೆ ನನಗೆ ಈಗಲೂ ಗೌರವವಿದೆ. ಅಗೌರವದಿಂದ ಮಾತನಾಡಿಲ್ಲ. ಈಗಲೂ ಯಡಿಯೂರಪ್ಪ ನಮ್ಮ ನಾಯಕರಿದ್ದಾರೆ ಎಂದರು.

ವಿಜಯೇಂದ್ರ ನೀನೆ ಡೇಟ್ ಫಿಕ್ಸ್ ಮಾಡು, ನಾನು ಶಿಕಾರಿಪುರದಲ್ಲಿ ನಿಮ್ಮ ಮನೆ ಮುಂದಿನಿಂದಲೇ ರಾಜ್ಯ ಪ್ರವಾಸ ಶುರುಮಾಡುತ್ತೇನೆ. ನಿನ್ನ ಸವಾಲನ್ನು ನಾನು ಸ್ವೀಕಾರ ಮಾಡಿರುವೆ, ನಾನು ಬರುವಾಗ ಪೊಲೀಸರು, ಗನ್ ಮ್ಯಾನ್ ತರಲ್ಲ, ಒಬ್ಬನೆ ಬರ್ತೇನೆ. ತಾಕತ್ತಿದ್ದರೆ ತಡಿ ನೋಡೋಣ ಎನ್ನುವ ಮೂಲಕ ಮುಂದಿನ ತಿನಗಳಲ್ಲಿ ರಮೇಶ್ ಜಾರಕಿಹೊಳಿಯವರಿಗೆ ಓಡಾಡಲು ಕಷ್ಟವಾಗುತ್ತದೆ ಎಂದಿದ್ದ ವಿಜಯೇಂದ್ರಾಗೆ ಸವಾಲು ಹಾಕಿದರು.

ಪಕ್ಷದ ಅಧ್ಯಕ್ಷ ಸ್ಥಾನದ ಬಗ್ಗೆ ನನಗೆ ಗೌರವವಿದೆಯೇ ಹೊರತು ವಿಜಯೇಂದ್ರ ಬಗ್ಗೆ ಇಲ್ಲ. ನಾನು ಓಡಾಡೋಕೆ ಆಗೋದಿಲ್ಲ ಎಂದಿರುವೆ. ಆದರೆ, ನಿನ್ನನ್ನು ಓಡಾಟ ಮಾಡದ ಹಾಗೆ ಮಾಡೋ ತಾಕತ್ತು ನನಗೆ ದೇವರು ಕೊಟ್ಟಿದ್ದಾನೆ. ಆದರೆ, ನಾನು ಹಾಗೆ ಮಾಡೋದಿಲ್ಲ ಎಂದು ಗೋಕಾಕ ಶಾಸಕ ಹೇಳಿದರು.

ಇವತ್ತು ನಾನು ಯಡಿಯೂರಪ್ಪಗೆ ಸಲಹೆ ಕೊಡುವೆ. ಯಡಿಯೂರಪ್ಪ ನೀವು ವಿಜಯೇಂದ್ರ ಬೆನ್ನು ಹತ್ತಿ ಹಾಳಾಗುತ್ತಿದ್ದೀರಿ. ಒಳ್ಳೆಯ ಅಧ್ಯಕ್ಷರನ್ನು ನೇಮಕ ಮಾಡೋದಕ್ಕೆ ಸಹಕಾರ ಕೊಡಿ, ಪದೇ ಪದೇ ಸೈಕಲ್ ನಿಂದ ಓಡಾಟ ಮಾಡಿದ್ದೇನೆ ಎನ್ನಬೇಡಿ. ಪಕ್ಷದಿಂದ ಅದರ ಸಾವಿರ ಪಟ್ಟು ಲಾಭವನ್ನ ಪಡೆದಿರುವಿರಿ ಎಂದು ವಾಗ್ದಾಳಿ ನಡೆಸಿದರು.

## ಬುಡಕಟ್ಟು ಸಾಹಿತ್ಯ ಪರಿಷತ್‌ಗೆ ಡಾ.ಭಗವಂತರಾಯ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.18: ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾಹಿತ್ಯ ಪರಿಷತ್‌ನ ನೂತನ ಜಿಲ್ಲಾಧ್ಯಕ್ಷರಾಗಿ ಪಟ್ಟಣ ಸರಕಾರಿ ಕಾಲೇಜಿನ ಉಪನ್ಯಾಸಕ ಡಾ.ಭಗವಂತರಾಯ ಬಳುಂಡಗಿ ಅವರನ್ನು ನೇಮಿಸಲಾಗಿದೆ.

ಈ ನಿಟ್ಟಿನಲ್ಲಿ ಈಚೆಗೆ ಕನ್ನಡ ಭವನದಲ್ಲಿ ಡಾ.ಭಗವಂತರಾಯ ಬಳುಂಡಗಿ, ರಾಜ್ಯಾಧ್ಯಕ್ಷ ಡಾ.ಎಸ್. ಕೆ. ಮೇಲಕಾರ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾಜಿ ಸಚಿವ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ಅಮರೇಶ್ವರಿ ಚಿಂಚನಸೂರು ನೇಮಕಾತಿ ಪತ್ರ ನೀಡಿ ಸನ್ಮಾನಿಸಿ, ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಂಘಟನೆ ತುಂಬಾ ಅವಶ್ಯಕವಾಗಿದೆ.

ಈ ನಿಟ್ಟಿನಲ್ಲಿ ಸಂಘಟನೆಗೊಂಡು ಅಧ್ಯಯನ ಕೈಗೊಂಡರೆ ಕೋಲಿ ಸಮಾಜವನ್ನು ಎಸ್‌ಟಿ ಸೇರಿಸುವಲ್ಲಿ ಅನುಕೂಲವೂ ಆಗಲಿದೆ ಎಂದರು.

ರಾಜ್ಯಾಧ್ಯಕ್ಷ ಡಾ.ಎಚ್. ಕೆ.ಮೇಲಕಾರ ಮಾತನಾಡಿ, ಡಾ.ಭಗವಂತರಾಯ ತಳ ಸಮುದಾಯಗಳ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನದ ವಿಷಯದಲ್ಲಿಯೇ ಪಿಎಚ್‌ಡಿ ಗ್ರಂಥ ಬರೆದಿದ್ದಾರೆ. ಇದರಿಂದಾಗಿ ಅವರಿಗೆ ಸಮುದಾಯಗಳ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಗತಿಗಳ ಕುರಿತು ತಿಳಿವಿದೆ. ಆದ್ದರಿಂದ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದರು.


ಡಾ.ಟಿ.ಡಿ.ರಾಜ್, ತೊನಸನಹಳ್ಳಿಯ ಮಲ್ಲಣ್ಣಪ್ಪ ಮಹಾಸ್ವಾಮೀಜಿ, ಸಿಂದಗಿಯ ಶಾಂತವೀರ ಸ್ವಾಮೀಜಿ ಇನ್ನಿತರರು ಇದ್ದರು.

## ಜ.20 ರಂದು ಚನ್ನಬಸವ ಪಟ್ಟದೇವರ ಜಯಂತ್ಯೋತ್ಸವ

ಬೀದರ. ಜ. 18 : ನಗರದ ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಭಾರತೀಯ ಬಸವ ಬಳಗ ಬೀದರ್ ವತಿಯಿಂದ ಜ.20 ರಂದು ಡಾ.ಚನ್ನಬಸವ ಪಟ್ಟದೇವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು ಹೇಳಿದರು.

ಇಂದು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಕನ್ನಡ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದ್ದು, ಈ ಪ್ರಶಸ್ತಿಗೆ? ರಾದ ಭೀಮಣ್ಣ ಖಂಡ್ರೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶರಣ ಶಿವಕುಮಾರ್ ಪಾಂಚಾಳ್ ಅವರ ತಂಡದಿಂದ ವಚನ ಸಂಗೀತ




ಹಾಗೂ 8ನೇ ತರಗತಿಯ ವಿದ್ಯಾರ್ಥಿಗಳಿಂದ ಮಹಾಕ್ರಾಂತಿ ನಾಟಕ ಪ್ರದರ್ಶನ ನಡೆಯಲಿದೆ. ಹಾಗಾಗಿ ಕಾರ್ಯಕ್ರಮದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಲಾಭ ಪಡೆಯಬೇಕು ಎಂದು ನುಡಿದರು.

ಕಾರ್ಯಕ್ರಮದ ದಿವ್ಯಸಾನಿಧ್ಯ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ವಹಿಸುವರು. ಮುಂಡರಗಿಯ ನಿಷ್ಕಲ ಮಂಟಪ ಬೈಲೂರ ಹಾಗೂ ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಮಹಾಸ್ವಾಮಿಗಳು ಭಾಗವಹಿಸಲಿದ್ದು, ಸಂಸದ ಸಾಗರ ಖಂಡ್ರೆ ಅವರು ಉದ್ಘಾಟಿಸಲಿದ್ದಾರೆ. ಗೌರವಾನ್ವಿತ ಅತಿಥಿಯಾಗಿ ತೆಲಂಗಾಣ ರಾಜ್ಯದ ಜಹೀರಾಬಾದ್ ಸಂಸದ ಸುರೇಶಕುಮಾರ್ ಶೆಟಕಾರ ಅವರು ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರೀಯ ಬಸವ ಬಳಗದ ರಾಜ್ಯಾಧ್ಯಕ್ಷ ಬಾಬು ವಾಲಿ, ವಿಜಯಕುಮಾರ್ ಪಾಟೀಲ್, ಬಾಬುರಾವ್ ದಾನಿ, ಸುರೇಶ್ ಚನ್ನಶೆಟ್ಟಿ ಹಾಗೂ ಜಯರಾಜ್ ಖಂಡ್ರೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪಶು ವಿವಿಯ ಜಾನುವಾರು ಮೇಳದ ಎರಡನೇ ದಿನ ಜಿಲ್ಲಾಧಿಕಾರಿಗಳು



ಬೀದರ : ಜ.18: ನಗರದಲ್ಲಿ ಜರುಗುತ್ತಿರುವ ಪಶು ವಿವಿಯ ಜಾನುವಾರು ಕುಕ್ಕುಟ ಹಾಗೂ ಮೀನುಗಾರಿಕೆ ಮೇಳದ ಎರಡನೆಯ ದಿನ ಅಪಾರ ಜನಸ್ತೋಮ ಪಾಲ್ಗೊಂಡಿತ್ತು. ಸುಮಾರು 40 ಸಾವಿರಕ್ಕಿಂತಲೂ ಹೆಚ್ಚು ಜಿಲ್ಲೆಯ ಶಾಲಾ ಕಾಲೇಜುಗಳು ವಿದ್ಯಾರ್ಥಿಗಳು, ರೈತರು ಹಾಗೂ ನಗರದ ಪ್ರಾಣಿ ಪ್ರಿಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಇಂದು ಸುಮಾರು 10 ಜಿಲ್ಲೆಯ ಶ್ರೇಷ್ಠ ರೈತ ಹಾಗೂ ಶ್ರೇಷ್ಠ ಮಹಿಳೆಯರಿಗೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮ ಪ್ರಶಸ್ತಿ ಪ್ರಧಾನ ಮಾಡಿದರು.

ನಂತರ ಮಾತನಾಡಿದ ಜಿಲ್ಲಾಧಿಕಾರಿಗಳು ಇಲ್ಲಿರುವ ಪಶುವೈದ್ಯಕೀಯ ವಿಶ್ವವಿದ್ಯಾಲಯ ಕೇವಲ ಜಿಲ್ಲೆಗಷ್ಟೇ ಸೀಮಿತವಲ್ಲ ಅದು ಇಡೀ ದೇಶದ ವೈಜ್ಞಾನಿಕ ಬೆಳವಣಿಗೆಗೆ ಸಹಕಾರಿ. ಜಿಲ್ಲೆಯ ಜನರು ಅದನ್ನು ಸದುಪಯೋಗಪಡಿಸಿಕೊಂಡು ಆರ್ಥಿಕ ಜೀವನಾಧಾರವನ್ನು ಉತ್ಕೃಷ್ಟಗೊಳಿಸಬೇಕು ಎಂದರು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಪ್ರಗತಿಪರ ರೈತರನ್ನ ಗುರುತಿಸಿ ಸನ್ಮಾನಿಸುತ್ತಿರುವುದು ವಿಶ್ವವಿದ್ಯಾಲಯ ಕಾರ್ಯ ನಿಜಕ್ಕೂ ಶ್ಲಾಘನೀಯ. ಇಲ್ಲಿರುವ ಅಲಂಕಾರಿಕ ಮೀನುಗಾರಿಕೆಯ ಮತ್ಸಲೋಕ ಅತ್ಯಂತ ಆಕರ್ಷಣೀಯವಾಗಿದ್ದು ಜಾನುವಾರುಗಳನ್ನು ಹಾಗೂ ಕೋಳಿಗಳು ಕೂಡ ನಮ್ಮ ವಿದ್ಯಾರ್ಥಿಗಳು ನೋಡಲಿ ಎಂದರು.

ಈ ಸಂದರ್ಭದಲ್ಲಿ ಇದ–ಕ್ಕೆ ಸಹಕಾರ ನೀಡಿದ ಎಲ್ಲಾ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳನ್ನು ಸನ್ಮಾನ್ಯ ಕುಲಪತಿಗಳಾದ ಪ್ರೊಫೆಸರ್ ಕೆ ಸಿ ವೀರಣ್ಣ ಸನ್ಮಾನಿಸಿ ಅಭಿನಂದಿಸಿದರು.

## ಜಿಲ್ಲೆಯಲ್ಲಿ ವೈಜ್ಞಾನಿಕ ಏರ ಬಲೂನ್: ಸಾರ್ವಜನಿಕರು ಭಯಭೀತರಾಗದಂತೆ ಜಿಲ್ಲಾಧಿಕಾರಿ ಸ್ಪಷ್ಟನೆ

ಬೀದರ:ಜ.18: ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಾಮೆಂಟಲ್ ರಿಸರ್ಚ ಹೈದ್ರಾಬಾದ ಅವರಿಂದ ದಿನಾಂಕ: 01–12–2024 ರಿಂದ 30–04–2025 ರವರೆಗೆ ಬಲೂನ್ ಫ್ಲೈಟ್‌ಗಳನ್ನು ಆಯೋಜಿಸಲಾಗಿದ್ದು, ಈ ಅವಧಿಯಲ್ಲಿ ಸುಮಾರು 10 ಬಲೂನ್ ಫ್ಲೈಟ್‌ಗಳನ್ನು ಸಂಶೋಧನೆಗಾಗಿ ವೈಜ್ಞಾನಿಕ ಉಪಕರಣಗಳನ್ನು ಒಯ್ಯುತ್ತಿವೆ. ಸುಮಾರು 20 ರಿಂದ 40 ಮೀಟರ್ ಉದ್ದದ ಹಗ್ಗದ ಮೇಲೆ ಉಪಕರಣಗಳು ಹೊಂದಿರುವ ಪ್ಯಾರಚೂಟ್ ಸಾಮಾನ್ಯವಾಗಿ ನಿಧಾನಗತಿಯಲ್ಲಿ ನೆಲಕ್ಕೆ ಬರುವ ಸಾಧ್ಯತೆವಿರುತ್ತದೆ. ಗಾಳಿಯ ದಿಕ್ಕನ್ನು ಅವಲಂಬಿಸಿ ಸದರಿ ಆಕಾಶ ಬುಟ್ಟಿಗಳು ಹೈದ್ರಾಬಾದ ಸುತ್ತಮುತ್ತಲಿನ ಪ್ರದೇಶ 200 ರಿಂದ 350 ಕಿ.ಮೀಟರ್ ಸ್ಥಳಗಳಿಗೆ ಇಳಿಯುವ ಸಾಧ್ಯತೆವಿರುತ್ತದೆ.

ಪ್ರಯುಕ್ತ ಬೀದರ ಜಿಲ್ಲೆಯ ಸಾರ್ವಜನಿಕರು ಯಾವುದೇ ಕಾರಣಕ್ಕೆ ಭಯಭೀತರಾಗದಂತೆ ತಿಳಿಸಿದೆ ಹಾಗೂ ಈ ವೈಜ್ಞಾನಿಕ ಉಪಕರಣಗಳು ನೆಲಕ್ಕೆ ಇಳಿದಿರುವುದನ್ನು ಕಂಡುಬಂದರೆ ತಮ್ಮ ಸಮೀಪದ ಪೋಲೀಸ್ ಠಾಣೆ ಅಥವಾ ತಹಸೀಲ್ ಅಥವಾ ಜಿಲ್ಲಾಡಳಿತ ಕಚೇರಿಗೆ ಸಂಪರ್ಕಿಸಲು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಪ ಲೋಕಾಯುಕ್ತರಿಂದ ದೂರುಗಳ ವಿಚಾರಣೆ; 87 ವಿವಿಧ ಬಗೆಯ ಪ್ರಕರಣ ಇತ್ಯರ್ಥ

ಬಳ್ಳಾರಿ,ಜ.18: ಉಪ ಲೋಕಾಯುಕ್ತ ಕಾರ್ಯವ್ಯಾಪ್ತಿಗೆ ಒಳಪಡುವ ಜಿಲ್ಲೆಯ ಒಟ್ಟು 274 ಪ್ರಕರಣಗಳಲ್ಲಿ 87 ವಿವಿಧ ಬಗೆಯ ಹಲವು ಪ್ರಕರಣಗಳನ್ನು ದೂರುದಾರರು ಮತ್ತು ಎದುರುದಾರರ ಸಮ್ಮುಖದಲ್ಲಿ ವಿಚಾರಣೆ ನಡೆಸಿ ಇತ್ಯರ್ಥ ಪಡಿಸಲಾಗಿದೆ ಎಂದಯ ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಹೇಳಿದರು.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಎರಡು ದಿನಗಳ ದೂರು/ಅಹವಾಲು ಸ್ವೀಕಾರ ಮತ್ತು ವಿಚಾರಣೆಯಲ್ಲಿ 177 ಹೊಸ ದೂರುಗಳ ವಿಚಾರಣೆ ಕೈಗೊಳ್ಳಲಾಗಿತ್ತು. ಅದರಲ್ಲಿ 68 ದೂರುಗಳನ್ನು ವಿಲೇವಾರಿಗೊಳಿಸಲಾಗಿದೆ. 97 ಬಾಕಿ ಇರುವ ದೂರುಗಳ ವಿಚಾರಣೆಯಲ್ಲಿ 19 ದೂರು ಇತ್ಯರ್ಥ ಪಡಿಸಲಾಗಿದೆ ಎಂದು ಅವರು ತಿಳಿಸಿದರು. ಉಪ ಲೋಕಾಯುಕ್ತ ವ್ಯಾಪ್ತಿಗೆ ಸಲ್ಲಿಕೆಯಾಗಿರುವ ದೂರುಗಳ ಸಂಬಂಧ ಸಮಸ್ಯೆಗಳಿಗೆ ಕಲ್ಪಿಸುವುದು ಲೋಕಾಯುಕ್ತದ ಉದ್ದೇಶವಾಗಿದೆ ಎಂದು ತಿಳಿಸಿದರು. ಬಳ್ಳಾರಿ ಜಿಲ್ಲೆಯಲ್ಲಿ ಜ.16 ರಿಂದ 18 ರವರೆಗೆ ಮೂರು ದಿನಗಳ ಕಾಲ ವಿವಿಧೆಡೆ ಅನಿರೀಕ್ಷಿತ ಭೇಟಿ ನಡೆಸಿ ಅಲ್ಲಿನ ಸ್ಥಿತಿ–ಗತಿ ಪರಿಶೀಲನೆ ನಡೆಸಿ ಸೂಕ್ತ ಸಲಹೆ–ಸೂಚನೆಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ ಎಂದರು. ಗುರುವಾರ (ಜ.16 ರಂದು) ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಾರ್ಡ್ (ಎಪಿಎಂಸಿ), ವೇಣಿವೀರಾಪುರ ಗ್ರಾಮದ ಬಳಿಯ ಘನ ತ್ಯಾಜ್ಯ ವಿಲೇವಾರಿ ಘಟಕ, ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿ, ಬಳ್ಳಾರಿ ತಾಲ್ಲೂಕು ಕಚೇರಿ, ಜಿಲ್ಲಾ ಆಸ್ಪತ್ರೆ, 100 ಹಾಸಿಗೆಗಳ ತಾಯಿ ಮತ್ತು ನವಜಾತ ಶಿಶುಗಳ ಆಸ್ಪತ್ರೆ, ವಿಮ್ಸ್ ಆಸ್ಪತ್ರೆ, ಪ್ರಾದೇಶಿಕ ಸಾರಿಗೆ ಕಚೇರಿ, ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿ–ಗತಿ ಪರಿಶೀಲನೆ ನಡೆಸಲಾಗಿದೆ ಎಂದರು.

### ಈಚನಾಳ ಪ್ರಾ. ಕೃ. ಪ. ಸ. ಸಂಘದ ಚುನಾವಣೆ

## ಅಧ್ಯಕ್ಷರಾಗಿ ದೇವರೆಡ್ಡಿ ಮೇಟಿ, ಉಪಾಧ್ಯಕ್ಷರಾಗಿ ಲಿಂಗರಾಜ್ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರು. ಜ. 17.– ತಾಲೂಕಿನ ಈಸನಾಳ ಪ್ರಾಥಮಿಕಕೃಷಿಪತ್ತಿನ ಸಹಕಾರ ಸಂಘದ 2025 ರಿಂದ 29 ರ ಅವಧಿಗೆ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ದೇವರೆಡ್ಡಿ ಎಸ್ ಮೇಟಿ, ಉಪಾಧ್ಯಕ್ಷರಾಗಿ ಲಿಂಗರಾಜ ಎ. ಯರಗುಂಟ ಇಬ್ಬರು ತಲಾ ಒಂದೊಂದೆ ನಾಮಪತ್ರ ಸಲ್ಲಿಸಿದ್ದರಿಂದಾಗಿ ಇನ್ನುಳಿದಂತೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅಧ್ಯಕ್ಷ ಉಪಾಧ್ಯಕ್ಷರಾಗಿ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾ ಅಧಿಕಾರಿ ಗಂಗಪ್ಪ ಘೋಷಣೆ ಮಾಡಿದರು.

ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ದೇವರೆಡ್ಡಿ ಎಸ್ ಮೇಟಿ ಅವರು ಮಾತನಾಡಿ ಅವಿರೋಧವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಕಾರ್ಣಿಕರ್ತರಾದ ಚುನಾಯಿತ ಎಲ್ಲಾ ನಿರ್ದೇಶಕರಿಗೆ ಮತ್ತು ಗ್ರಾಮದ ಹಿರಿಯ ಮುಖಂಡರಿಗೆ ಅಭಿನಂದನೆಗಳನ್ನು ಸಲ್ಲಿಸಿ ಯಾವುದೇ ಕಾರಣಕ್ಕೂ ನಿಮ್ಮ ಪ್ರೀತಿ ವಿಶ್ವಾಸಕ್ಕೆ ಧಕ್ಕೆ ಆಗದಂತೆ ಸಂಘದ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಮಾರ್ಗದರ್ಶನದಲ್ಲಿ ಆಡಳಿತ ನಡೆಸುವುದಾಗಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬಸನಗೌಡ ಮೇಟಿ, ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಲಿಂಗರೆಡ್ಡೆಪ್ಪ ಮೇಟಿ,ಪಿಡ್ಡನಗೌಡ,ಬಸವರಾಜ್ ನೀರಲಕೇರ,ಬಸನಗೌಡ ಮಾಲಿ ಪಾಟೀಲ್,ಅಮರೇಶ ಪೂಜಾರ್, ಪೀರಸಾಬ್ ಪಂಚಮ,ನಾಗಪ್ಪ ಸಾಲಮನಿ, ಅಮರೇಶ್ ಜಿ ಮೇಟಿ, ದೊಡ್ಡಪ್ಪ ಚಿಗರಿ, ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕರಾದ ಪುಂಡನಗೌಡ ಆರ್ ಪಾಟೀಲ್, ಲೆಕ್ಕಿಗ ಖಾಜಾಸಾಬ್,ಸಹಕಾರಿ ಸಂಘದ ನೂತನವಾಗಿ ಆಯ್ಕೆಯಾದ ನಿರ್ದೇಶಕರುಗಳಾದ ಬಸವರಾಜ್ ನೀರಲಕೇರ, ಬಸಪ್ಪ ಚಲವಾದಿ, ಶೇಖರಪ್ಪ ಚಿತ್ರನಾಳ, ದೇವರೆಡ್ಡಿ ಮೇಟಿ, ಶಂಕರಗೌಡ ಹೊಸಮನಿ, ಯಂಕಣ್ಣ ಗಡ್ಡಿ, ಅಮರೇಶ ಮರಗಂಟನಾಳ, ಗೌಡಪ್ಪ ನೀರಲ ಕೇರಾ, ಶ್ರೀಮತಿ ಪೀರ ಜಾನಬಿ ರಾಜೇಸಾಬ್, ಶ್ರೀಮತಿ ಗುಂಡಮ್ಮ ಗಡ್ಡೆಪ್ಪ ಬಡಿಗೇರ್, ಚುನಾವಣೆಯಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾದ ನಿರ್ದೇಶಕರುಗಳಿಗೆ ಸಹಕಾರ ಸಂಘದಿಂದ ಚುನಾವಣಾ ಅಧಿಕಾರಿ ಗಂಗಪ್ಪ ಅವರು ಪ್ರಮಾಣ ಪತ್ರ ನೀಡಿ ಸನ್ಮಾನಿಸಿದರು.

## ಮಾಸಿಕ ಶರಣ ಸಂಗಮ ಕಾರ್ಯಕ್ರಮ




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–(ಹುಲಸೂರ) :– ತಾಲೂಕಿನ ಲಿಂಗಾಯಿತ ಮಹಾಮಠ ಗೋರಟ (ಬಿ) ಗ್ರಾಮದಲ್ಲಿ ನಡೆದ ಮಾಸಿಕ ಶರಣಸಂಗಮಕಾರ್ಯಕ್ರಮದಲ್ಲಿ ಶರಣೆ ರೂಪಾವತಿ ರಾಜೇಶ್ವರೆ ಮಾತನಾಡಿ

ಸಮಾಜದ ಅರ್ಧಭಾಗವಾಗಿರುವ ಹೆಣ್ಣಿನ ಸ್ಥಿತಿ ಗತಿಯನ್ನು ಭಾರತೀಯ ಇತಿಹಾಸದ ಯುಗ ಯುಗಾಂತರಗಳಲ್ಲಿ ಅವಲೋಕಿಸಿದಾಗ ಅಲ್ಲಿ ಹರಿದ ಕಣ್ಣೀರು, ಬತ್ತಿದ ಭಾವನೆ, ಹೆಣ್ಣಾಗಿ ಹುಟ್ಟುವುದೇ ಶಾಪ – ಪಾಪವೆಂಬ ದೈನ್ಯತೆ–ಹೀನತೆಗಳ ಕಾರ್ಗತ್ತಲೆ ಕಂಡು ಬರುತ್ತದೆ. ಹೆಣ್ಣನ್ನು ಬೇಕು–ಬೇಡ ಸುಖ–ದುಃಖ ಹಿಗ್ಗು ಕುಗ್ಗುಗಳನ್ನು ಹೊಂದಿರುವ ಜೀವವಾಗಿ,ಮನವುಳ್ಳ ಮಾನವಳನ್ನಾಗಿ ನೋಡದೆ ಭೋಗದ ವಸ್ತುವಾಗಿ ಬಳಸಿದ್ದೆ ಹೆಚ್ಚು.

ಈ ವೇದನೆಯ ಬಿಸಿ ಉಸಿರು ದೇವನಿಗೆ ತಲುಪಿತ್ತೇನೋ ಎನ್ನುವಂತೆ ಸರ್ವ ಸಂಕಲೆಯನ್ನು ಕಳಚುವ ಕ್ರಾಂತಿಕಾರಿಯಾಗಿ 12ನೇ ಶತಮಾನದಲ್ಲಿ ಅಭೂತಪೂರ್ವ ಸಮಗ್ರ ಕ್ರಾಂತಿಯ ನೇತಾರರಾಗಿ ಮೂಡಿಬಂದ ಬಸವಣ್ಣನವರು ಹೆಣ್ಣಿನ ಗೋಳನ್ನು ಕೇಳಿ ಕಂಡು ಮರುಗಿದರು. ತಾನು ಹುಟ್ಟಿದ ಮನೆಯಿಂದಲೇ ಕ್ರಾಂತಿ ಕಹಳೆಯುದಿದರು. ಪುರುಷನಂತೆ ಸ್ತ್ರೀಗೆ ಸಮಾನತೆ ಸ್ವಾತಂತ್ರ್ಯತೆ ನೀಡಬೇಕೆಂದು ಆಗ್ರಹಿಸಿದರು. ಪಂಡಿತ ಪುರೋಹಿತರು ಅದಕೊಪ್ಪದಿದ್ದಾಗ ಧರ್ಮಶಾಸ್ತ್ರಗಳನ್ನು ದಿಕ್ಕರಿಸಿ ಮನೆ ಬಿಟ್ಟು ನಡೆದು ಸಸ್ತ್ರೀಯರ ಭಾಗ್ಯದ ಬಾಗಿಲು ತೆರೆದು ಬಾಳ ಬೆಳಕಾದರು ಎಂದು ಅನುಭವ ನುಡಿದರು.

ಸಾನಿಧ್ಯವಹಿಸಿ ಲಿಂಗಾಯತ ಮಹಾಮಠದ ಪೂಜ್ಯಶ್ರೀ ಪ್ರಭುದೇವ ಮಹಾ ಸ್ವಾಮೀಜಿ ಮಾತನಾಡಿ

ಅಳಿಮನ ಘನಮನವೆಂಬ ಎರಡು ಪ್ರಕಾರದ ಮನಗಳುಂಟು. ಅಳಿಮನವೆಂದರೆ ಪ್ರಪಂಚ ತುಂಬಿಕೊಂಡಿದ್ದು. ಘನ–ಮನವೆಂದರೆ ಪರಮಾತ್ಮನನ್ನು ತುಂಬಿಕೊಂಡಿದ್ದು.ಯಾರ ಮನದಲ್ಲಿ ಘನ ತುಂಬಿಕೊಂಡಿದೆಯೋ ಅದೆಂದೂ ಪ್ರಾಪಂಚಿಕ ಸುಖ ಭೋಗಗಳ ಆಸೆಗೆ ಸೋಲದು. ರಣರಂಗದಲ್ಲಿ ಹೋರಾಡಿ ಗೆಲುವುದಕ್ಕಿಂತ ಅಳಿಮನದ ವಿರುದ್ಧ ಸೆಣಸಿ ಜಯಿಸುವುದು ವೀರತನ. ಶರಣರೆಂದರೆ ಸೋಲದವರು ತಮಗೆ ತಾವೇ ಪ್ರತಿಜ್ಞಾ ಬದ್ಧರಾದ ಅವರು ಆಸೆ ಆಮೀಷಗಳನ್ನೊಡ್ಡಿ ದೂರ ಮಾಡುವ ದೇವನನ್ನು ಸೋಲಿಸುವ ಶೂರರು. ಎಂದು ನುಡಿದರು. ಗೋದಾವರಿ ತಾಯಿ ಉದ್ಘಾಟನೆ ಮಾಡಿದರು. ವಿಜಯಲಕ್ಷ್ಮಿ ರಾಜೋಳೆ, ಷಟಸ್ಥಲ ಧ್ವಜಾರೋಹಣ: ಮಾಡಿದರು. ಮಂದಾಕಿನಿ ಕಾದೇಪೂರೆ ಮುಖ್ಯ ಅತಿಥಿಗಳಾಗಿ ರೂಪಾವತಿ ಬಿರಾದಾರ್, ಕರುಣಾದೇವಿ ಕಣಜೆ, ಗುರು ಪೂಜೆ. ಪ್ರಜ್ವಲ್ ರಾಜೋಳೆ, ಶ್ರಾವಣಿ ರಾಜೋಳೆ ಇದ್ದರು. **ಭಕ್ತಿ ದಾಸೋಹ:** ಸಂಗಮ್ಮ ಬಾಬುರಾವ ರಾಜೋಳೆ ಮಾಡಿದರು.

## ಸಂವಿಧಾನ ಸಂರಕ್ಷಣಾ ಅಭಿಯಾನ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ನಗರದ ಭಾಗ್ಯನಗರ ರಸ್ತೆಯಲ್ಲಿ ಬರುವ ಬಾಲಾಜಿ ಫಂಕ್ಷನ್ ಹಾಲ್ ನಲ್ಲಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಂಸದ ಕೆ. ರಾಜಶೇಖರ ಹಿಟ್ನಾಳ, ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ಎಂಎಲ್ ಸಿ ಬಿಲ್ಕಿಸ್ ಬಾನು, ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ, ಮಾಜಿ ಸಂಸದ ಸಂಗಣ್ಣ ಕರಡಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಬಯ್ಯಾಪೂರ, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ಕುಡಾ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ಗಂಗಾವತಿ ಪ್ರಾಧಿಕಾರ ಅಧ್ಯಕ್ಷ ಇಲಿಯಾಸ್ ಅನ್ಸಾರಿ, ನಗರಸಭೆ ಸದಸ್ಯರಾದ ಮುತ್ತುರಾಜ ಕುಷ್ಟಗಿ, ಅಕ್ಬರ್ ಪಾಶಾ ಪಲ್ಟನ್, ಅಜಿಮ್ ಅಕ್ತಾರ್, ಗ್ಯಾರಂಟಿ ಸಮಿತಿ ಜಿಲ್ಲಾ ಉಪಾಧ್ಯಕ್ಷರಾದ ಮಂಜುನಾಥ ಜಿ. ಗೊಂಡಬಾಳ ಮತ್ತು ಎಂ. ಎಸ್. ಖಾದ್ರಿ, ಮುಖಂಡರುಗಳಾದ ಕೃಷ್ಣಾ ಇಟ್ಟಂಗಿ, ಕೃಷ್ಣಾ ಗಲಿಬಿ, ಗೂಳಪ್ಪ ಹಲಗೇರಿ, ಕಾಟನ್ ಪಾಶಾ, ಕೆ. ಎಂ. ಸೈಯ್ಯದ್, ಖಾಜಾ ಮೈನುದ್ದೀನ್ ಮುಲ್ಲಾ, ಗಾಳೆಪ್ಪ ಪೂಜಾರ, ಟಿ. ರತ್ನಾಕರ, ಯಮನಪ್ಪ ಕಬ್ಬೇರ ಅನೇಕರಿದ್ದರು.

## ಚಿನ್ನರ ಕರ್ನಾಟಕ ದರ್ಶನಕ್ಕೆ ಮಹಿಪಾಲರೆಡ್ಡಿ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:– ಕೆಂಭಾವಿ ವಲಯದ ಚಿನ್ನರ ಕರ್ನಾಟಕ ಪ್ರವಾಸ ದರ್ಶನಕ್ಕೆ ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಮಕ್ಕಳ ಪ್ರವಾಸಕ್ಕೆ ಶಿಕ್ಷಣ ಪ್ರೇಮಿಗಳು ಮಾಜಿ ಪುರಸಭೆ ಸದಸ್ಯರಾದ ಶ್ರೀ ಮಹಿಪಾಲರೆಡ್ಡಿ ಡಿಗ್ಗಾವಿ ಅವರು ಚಾಲನೆ ನೀಡಿ ಪ್ರವಾಸಕ್ಕೆ ಹೊರಟ ವಿದ್ಯಾರ್ಥಿಗಳಿಗೆ ಶುಭಕೋರಿದ ಡಿಗ್ಗಾವಿ ಅವರು ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪ್ರವಾಸವು ಪೂರಕವಾಗಿದ್ದು, ಅದಕ್ಕೆ ಸರ್ಕಾರವು ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತವಾಗಿ ಐದು ದಿನಗಳವರೆಗೆ ಪ್ರವಾಸ ಭಾಗ್ಯ ಕಲ್ಪಿಸಿ ಕೊಟ್ಟಿದ್ದಾರೆ ಇದರ ಲಾಭವನ್ನು ವಿದ್ಯಾರ್ಥಿಗಳು ಪಡೆಯಬೇಕು ದೇಶ ಸುತ್ತಿ ನೋಡು ಕೋಶ ಓದಿ ನೋಡು ಎಂಬ ಮಾತಿನಂತೆ ಕೋಶ ಓದುವುದರಿಂದ ಜ್ಞಾನ ದೊರೆ–ಯುತ್ತದೆ ದೇಶ ಸುತ್ತುವುದರಿಂದ ಭೌದಿಕ ಜ್ಞಾನ ದೊರೆಯುತ್ತದೆ ಪ್ರವಾಸಕ್ಕೆ ಹೊರಟ ಎಲ್ಲಾ ಮಕ್ಕಳು ಕಾಪಿ ಪೆನ್ನು ತೆಗೆದುಕೊಂಡು ಹೋಗಿ ತಾವು ನೋಡಿದ ಸ್ಥಳಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಬರೆದುಕೊಂಡು ಬರಬೇಕು ಮುಂದೆ ಅದು ನಿಮ್ಮ ಪ್ರವಾಸ ಕಥನವಾಗುತ್ತದೆ ಅದಕ್ಕೆ ತಾವು ವೀಕ್ಷಿಸಿದ ಸ್ಥಳಗಳ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸಿ, ದಾಖಲಿಸಬೇಕೆಂದು ಎಂದು ಮೈಹಿಪಾಲರಡ್ಡಿ ಹೇಳಿದರು. ಈ ಸಂದರ್ಭದಲ್ಲಿ ಸಿಆರ್ ಪಿ ಬಂದೇನವಾಜನಾಲತವಾಡ,ಇಸಿಓ ಶಿವಪುತ್ರಪ್ಪ,ಎಚ್ ಎಮ್ ಎಮ್.ಬಿ ಪಾಟೀಲ, ಕೆಆರ್ ಪಾಟೀಲ್, ಸಂಗೀತ ಶಿಕ್ಷಕ ಯಮನೇಶ ಯಾಳಗಿ,ಚಿತ್ರಕಲೆ ಶಿಕ್ಷಕ ಶಶಿಧರ, ರಂಗಪ್ಪ ವಡ್ಡರ ಸೇರಿದಂತೆ ಇತರರು ಹಾಜರಿದ್ದರು..

## ಜಂತುಹುಳು ಮಾತ್ರೆ ಸೇವಿಸಿದ 5 ಮಕ್ಕಳು ಅಸ್ವಸ್ಥ



ಮಲ್ಲಮ್ಮ ನುಡಿ ವಾರ್ತೆ

ಇಂಡಿ : ಜಂತುಹುಳು ಮಾತ್ರೆ ನುಂಗಿದ 5 ಮಕ್ಕಳು ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆ ಸೇರಿದ ಘಟನೆ ಇಂಡಿ ತಾಲೂಕಿನ ಹಿರೇಬೇವನೂರ ವಿಶ್ವಭಾರತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಘಟನೆಯಲ್ಲಿ ಶಾಲೆಯ ಶರತ್ ಕೋರೆ, ವಿರಾಟ್ ಚಾಂದಕವಟೆ, ಯುವರಾಜ ಸ್ವಾಮಿ, ಪ್ರೀತಮ್ ವಳಸಂಗ್, ಸಂಕೇತ ಗೊಟ್ಯಾಳ ಎಂಬ ವಿದ್ಯಾರ್ಥಿಗಳು ಅಸ್ವಸ್ಥಗೊಂಡು ಆಸ್ಪತ್ರೆ ಸೇರಿ ಚಿಕಿತ್ಸೆ ಪಡೆ–ಯುತ್ತಿದ್ದಾರೆ. ಶುಕ್ರವಾರ ಮಧ್ಯಾಹ್ನದ ಊಟದ ನಂತರ ಶಾಲೆಯ ಮಕ್ಕಳಿಗೆ ಜಂತುಹುಳು ಮಾತ್ರೆ ನೀಡಲಾಗಿದ್ದು, ಜಂತುಹುಳು ಮಾತ್ರೆ ನುಂಗಿದ ಒಟ್ಟು 33 ಮಕ್ಕಳಲ್ಲಿ 5 ಮಕ್ಕಳು ಹೊಟ್ಟೆ ಹುರಿ ತಾಳಲಾರದೇ ಶಾಲೆಯಲ್ಲಿ ಒದ್ದಾಡುತ್ತಿದ್ದಾಗ ಗಾಬರಿಯಾದ ಶಾಲಾ ಶಿಕ್ಷಕರು ಕೂಡಲೆ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಆಸ್ಪತ್ರೆಗೆ ಬಂದ ಮಕ್ಕಳಿಗೆ ಕೂಡಲೇ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳು ಮಾತ್ರೆ ಸೇವನೆಯಿಂದ ಏನೂ ಆಗುವುದಿಲ್ಲ ಕೆಲವು ಮಕ್ಕಳಿಗೆ ಹೀಗಾಗುತ್ತದೆ. ಇದರಿಂದ ಪೋಷಕರು ಗಾಬರಿಪಡುವುದು ಬೇಡ ಎಂದು ಸಮಾಧಾನ ಹೇಳಿದರು.

## ಸಾರ್ವಜನಿಕರು ಆತಂಕ ಪಡಬೇಡಿ:ಡಿಸಿ

ಮಲ್ಲಮ್ಮ ನುಡಿ ವಾರ್ತೆ

ಬೀದರ: ಟಾಟಾ ಇನ್ಸಿಟ್ಯೂಟ್ ಆಫ್ ಫಂಡಾಮೆಂಟಲ್ ರಿಸರ್ಚ ಹೈದ್ರಾಬಾದ ರವರಿಂದ ದಿನಾಂಕ:01.12.2024 ರಿಂದ 30.04.2025 ರ ವರೆಗೆ ಬಲೂನ್ ಪ್ಲೈಟ್ ಗಳನ್ನು ಆಯೋಜಿಸಲಾಗಿದ್ದು, ಸದರಿ ಅವಧಿಯಲ್ಲಿ ಸುಮಾರು 10 ಬಲೂನ್ ಪ್ಲೈಟ್ ಗಳನ್ನು ಸಂಶೋಧನೆಗಾಗಿ ವೈಜ್ಞಾನಿಕ ಉಪಕರಣಗಳನ್ನು ಒಯ್ಯುತ್ತಿವೆ. ಸುಮಾರು 20 ರಿಂದ 40 ಮೀಟ–ರ್ ಉದ್ದದ ಹಗ್ಗದ ಮೇಲೆ ಉಪಕರಣಗಳು ಹೊಂದಿರುವ ಪ್ಯಾರಚೂಟ್ ಸಾಮಾನ್ಯವಾಗಿ ನಿಧಾನಗತಿಯಲ್ಲಿ ನೆಲಕ್ಕೆ ಬರುವ ಸಾಧ್ಯತೆವಿರುತ್ತದೆ. ಗಾಳಿಯ ದಿಕ್ಕನ್ನು ಅವಲಂಬಿಸಿ ಸದರಿ



ಆಕಾಶ ಬುಟ್ಟಿಗಳು ಹೈದ್ರಾಬಾದ ಸುತ್ತಮುತ್ತಲಿನ ಪ್ರದೇಶ 200 ರಿಂದ 350 ಕಿ.ಮೀಟರ್ ಸ್ಥಳಗಳಿಗೆ ಇಳಿಯುವ ಸಾಧ್ಯತೆವಿರುತ್ತದೆ. ಪ್ರಯುಕ್ತ ಬೀದರ ಜಿಲ್ಲೆಯ ಸಾರ್ವಜನಿಕರು ಯಾವುದೇ ಕಾರಣ–ಕ್ಕೆ ಭಯಭೀತರಾಗದಂತೆ ತಿಳಿಸಿದೆ ಹಾಗೂ ಸದರಿ ವೈಜ್ಞಾನಿಕ ಉಪಕರಣಗಳು ನೆಲಕ್ಕೆ ಇಳಿದಿರುವುದನ್ನು ಕಂಡುಬಂದರೆ ತಮ್ಮ ಸಮೀಪದ ಪೋಲೀಸ್ ಠಾಣೆ ಅಥವಾ ತಹಸೀಲ್ /ಜಿಲ್ಲಾಡಳಿತ ಕಚೇರಿಗೆ ಸಂಪರ್ಕಿಸಲು ತಿಳಿಸಿದೆ.

### ರಾಯಚೂರಿನಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರ, ಸುಸಜ್ಜಿತ

## ತಾರಾಲಯ ನಿರ್ಮಿಸಲು ಕ್ರಮ: ಸಚಿವರಾದ ಎನ್.ಎಸ್. ಬೋಸರಾಜು




ಮಲ್ಲಮ್ಮ ನುಡಿ ವಾರ್ತೆ

ರಾಯಚೂರ ಜನವರಿ 18–ರಾಯಚೂರು ನಗರದಲ್ಲಿ ಆಧುನಿಕ ಪ್ರಾದೇಶಿಕ ವಿಜ್ಞಾನ ಕೇಂದ್ರದ ಜೊತೆಗೆ ಸುಸಜ್ಜಿತ ತಾರಾಲಯ ನಿರ್ಮಾಣಕ್ಕೆ ಅಗತ್ಯ ಪ್ರಸ್ತಾವನೆ ಸಿದ್ದಪಡಿಸಲು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಜನವರಿ 16ರಂದು ಬೆಂಗಳೂರು ನಗರದ ಬಹುಮಹಡಿ ಕಟ್ಟಡದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಮ್ಮೇಳನ ಸಭಾಂಗಣದಲ್ಲಿ ರಾಯಚೂರು ಜಿಲ್ಲಾಧಿಕಾರಿಗಳು ಮತ್ತಿತರರೊಂದಿಗೆ ಮಹತ್ವದ ಸಭೆ ನಡೆಸಿ ಚರ್ಚಿಸಿದರು.

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ವಿಜ್ಞಾನ ಕೇಂದ್ರಗಳನ್ನು ನಿರ್ಮಿಸಲು ಆದ್ಯತೆ ನೀಡಿದ್ದು, ರಾಯಚೂರು ಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ಮಾಣದ ಕಾರ್ಯವನ್ನು ತಕ್ಷಣವೇ ಚುರುಕುಗೊಳಿಸುವಂತೆ ಸೂಚಿಸಿದರು.

ವಿಜ್ಞಾನ ಕೇಂದ್ರ ನಿರ್ಮಾಣಕ್ಕೆ 90 ದಿನಗಳಲ್ಲಿ ವಿನ್ಯಾಸ ನೀಡುವಂತೆ ವಾಸ್ತುಶಿಲ್ಪಿ ತಂಡಕ್ಕೆ ಸೂಚನೆ ನೀಡಿ ಡಿಪಿಆರ್ ಸಿದ್ಧಪಡಿಸಿ ಕಾಮಗಾರಿಗೆ ಚಾಲನೆ ನೀಡುವಂತೆ ಸಚಿವರು ನಿರ್ದೇಶನ ನೀಡಿದರು. ಜೊತೆಗೆ ರಾಯಚೂರು ವಿಜ್ಞಾನ ಕೇಂದ್ರದಲ್ಲಿ ಸುಸಜ್ಜಿತ ತಾರಾಲಯ ನಿರ್ಮಾಣ ಮಾಡಲು ಅಗತ್ಯ ಪ್ರಸ್ತಾವನೆ ಸಿದ್ದಪಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಂಬರುವ ಬಜೆಟ್ ನಲ್ಲಿ ಕೋಲಾರ,ಚಿತ್ರದುರ್ಗ,ರಾಮನಗರ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಭೂ ಸ್ವಾಧೀನಪಡಿಸಿಕೊಂಡು ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ಬಾಕಿಯಿರುವ ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಹಾಗೂ ಬೆಳಗಾವಿ ವಿಜ್ಞಾನ ಕೇಂದ್ರಗಳನ್ನು ತ್ವರಿತವಾಗಿ ಪ್ರಾರಂಭಿಸಬೇಕು. ಗೌರಿ ಬಿದನೂರಿನಲ್ಲಿರುವ ಡಾ.ಎಚ್. ನರಸಿಂಹಯ್ಯ ವಿಜ್ಞಾನ ಕೇಂದ್ರವನ್ನು ಅಂತಾರಾಷ್ಟ್ರೀಯ ವಿಜ್ಞಾನ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ತೀರ್ಮಾನಿಸಿದ್ದು, ಇದಕ್ಕೆ ಅಗತ್ಯವಾಗಿರುವ ಭೂಮಿ ಲಭ್ಯವಿದ್ದು, ಇದನ್ನು ವಶಕ್ಕೆ ಪಡೆಯಲು ಸ್ಥಳೀಯರನ್ನೊಳಗೊಂಡ ಸಮಿತಿ ರಚಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಚರ್ಚಿಸಿ ಕ್ರಮ ಕೈಗೊಳಾಗುವುದು ಎಂದು ಸಚಿವರು ತಿಳಿಸಿದರು.

ಈ ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಗಳದ ಡಾ. ಏಕರೂಪ ಕೌರ್, ಕೆಸ್ಟೆಪ್ಸ್ ವ್ಯವಸ್ಥಾಪಕ ನಿರ್ದೇಶಕರಾದ ಸದಾಶಿವ ಪ್ರಭು, ರಾಯಚೂರು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ವಿಐಟಿಎಂನ ಅಧಿಕಾರಿಗಳು ಉಪಸ್ಥಿತರಿದ್ದರು.

## ಅಮರ ಹಡಪದ ರವರ ಸುಪುತ್ರ ವಿನೀತ 5ನೇ ವರ್ಷದ ಹುಟ್ಟು ಹಬ್ಬ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ಇಟಗಾ ಗ್ರಾಮದ ಆಶಾ ಅಮರನಾಥ ಹಡಪದ ರವರ ಸುಪುತ್ರ ವಿನೀತ ಅವನ 5ನೇ ವರ್ಷದ ಹುಟ್ಟು ಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಅದ್ದೂರಿಯಾಗಿ ಆಚರಣೆ ಮಾಡಲಾಯಿತ್ತು.

ಈ ಸಂದರ್ಭದಲ್ಲಿ ಹಡಪದ ಸಮಾಜದ ಹುಮನಾಬಾದ ತಾಲೂಕ ಉಪಾಧ್ಯಕ್ಷ ಕಲ್ಲಪ್ಪ ಹಣಕುಣಿ, ನಾಗೇಶ ಸಿಂಧನಕೇರಾ, ರಾಜಕುಮಾರ ಆರ್. ಹಡಪದ, ಪರಮೇಶ್ವರ ಖಾಶೆಂಪುರ್, ಸಂಗಪ್ಪ ಹಡಪದ, ಸಂಜೀವ ಮಾನೆ, ಮಾಣಿಕ ಹಡಪದ, ಸುಭಾಷ, ಸತೀಷ ಗಡವಂತಿ, ಮಲ್ಲು, ಮಹದೇವ ಅತ್ತಲ್ಲಾಪುರ, ಬಾಬುರಾವ, ಚನ್ನಯ್ಯ, ಗಣೇಶ, ಸಾಯಿ, ವಿಕಾಸ್, ಯುವಾನ, ಚೈತನ್ಯ, ಅಂಬಿಕಾ, ಚೈತ್ರ, ಕಲ್ಪನಾ, ಬೇಬಿ, ಸುನೀತಾ, ಸಾವಿತ್ರ, ಪಾರ್ವತಿ, ರೇಣುಕಾ, ಪೂಜಾ, ರುತುಜಾ, ಶಿಲ್ಪ ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.

## ಎಸ್.ಕೆ.ಮೋದಿ ಶಾಲೆಯಲ್ಲಿ ದಾನಿಗಳ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ವೀರಶೈವ ವಿದ್ಯಾವರ್ಧಕ ಸಂಘದ ಎಸ್.ಕೆ.ಮೋದಿ ನ್ಯಾಷನಲ್ ಸ್ಕೂಲ್ ನಲ್ಲಿ ಶಾಲಾ ವಾರ್ಷಿಕೋತ್ಸವ ಹಾಗೂ ದಾನಿಗಳ ದಿನಾಚರಣೆಯನ್ನು ಆಚರಿಸಲಾಯಿತು.

ಎರಡು ದಿನ ನಡೆದ ಈ ದಿನಾಚರಣೆಯಲ್ಲಿ ಶಾಲಾ ದಾನಿಗಳಾದ ಮೋದಿ ಗ್ರೂಪ್ ಆಫ್ ಕಂಪನೀಸ್ ನ ಸಂತೋಷ್ ಮೋದಿ ಅವರ ಪತ್ನಿ ಮಂಜು ಮೋದಿ, ವೀವಿ ಸಂಘದ ಅಧ್ಯಕ್ಷರಾದ ಅಲ್ಲಂ ಗುರುಬಸವರಾಜ, ಉಪಾಧ್ಯಕ್ಷರಾದ ಜಾನೆಕುಂಟೆ ಬಸವರಾಜ್, ಕಾರ್ಯದರ್ಶಿ ಡಾ.ಅರವಿಂದ್ ಪಟೇಲ್, ಸಹಕಾರ್ಯದರ್ಶಿ ಯಾಳ್ಪಿ ಮೇಟಿ ಪಂಪನಗೌಡ, ಖಜಾಂಚಿ ಬೈಲುವದ್ದಿಗೇರಿ ಎರಿಸ್ವಾಮಿ, ಎಸ್.ಕೆ.ಮೋದಿ ನ್ಯಾಷನಲ್ ಸ್ಕೂಲ್ ಅಧ್ಯಕ್ಷರಾದ ಏಳುಬೆಂಚಿ ರಾಜಶೇಖರಗೌಡ, ಶಾಲೆಯ ಪ್ರಾಂಶುಪಾಲರಾದ ಸುನಂದಾ ಎಂ.ಪಾಟೀಲ್, ಶಾಲಾ ಆಡಳಿತ ಮಂಡಳಿಯ ಸದಸ್ಯರಾದ ಅಣ್ಣ ವಿರೂಪಾಕ್ಷಪ್ಪ, ವಸಂತಕುಮಾರ್ ಗೌಡ ಪಾಟೀಲ್, ದರೂರು ಶಾಂತನಗೌಡ ಸೇರಿದಂತೆ ವೀವಿ ಸಂಘದ ಅನೇಕ ಪದಾಧಿಕಾರಿಗಳು ಇದ್ದರು.

ಮಕ್ಕಳಿಂದ ನೃತ್ಯ, ಕಿರು ನಾಟಕ, ಹಾಡುಗಳು, ಸೃಜನಶೀಲತೆಯ ಸೊಬಗು ವೇದಿಕೆಯುದ್ದಕ್ಕೂ ಕಂಡು ಬಂದಿತು. ಕ್ಷಿತಿಜ್ 2ಕೆ25 ಹೆಸರಿನಲ್ಲಿ ನಡೆದ ಈ ಸಮಾರಂಭ ಅದ್ದೂ–ರಿಯಾಗಿ ಆಯೋಸಿದ್ದು ಮಕ್ಕಳು, ಪೋಷಕರು, ಶಾಲೆಯ ಸಮಸ್ತ ಸಿಬ್ಬಂದಿ ವರ್ಗ ಈ ವೇಳೆ ಇದ್ದರು.

# ಕೊಪ್ಪಳ ತಾ. ಪಂನಲ್ಲಿ 5 ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.18:ರಾಜ್ಯಸರ್ಕಾರ ಜಾರಿಗೆ ತಂದಿರುವ 05 ಗ್ಯಾರಂಟಿಗಳು ಸಮರ್ಪಕವಾಗಿ ಅನುಷ್ಠಾನಿಸಲು ಕೊಪ್ಪಳ ತಾಲೂಕ ಮಟ್ಟದ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆ ಶ್ರೀ.ಬಾಲಚಂದ್ರನ್ ಎಸ್ ರವರ ಅಧ್ಯಕ್ಷತೆಯಲ್ಲಿ ಕೊಪ್ಪಳ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಜರುಗಿತು.

ಗೃಹಲಕ್ಷ್ಮೀಯೋಜನೆಯ ಕುರಿತು ಸಭೆಯಲ್ಲಿ ಚರ್ಚಿಸಿದಾಗ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಕ್ಟೋಬರ್ ವರೆಗೆ ಹಣ ಪಾವತಿಯಾಗಿದೆ ಎಂದರು. ತಾಂತ್ರಿಕ ಸಮಸ್ಯೆಯಿಂದ ಕೆಲವು ಫಲಾನುಭವಿಗಳಿಗೆ ಹಣ ಜಮೆಯಾಗಿರುವದಿಲ್ಲ. ಕೂಡಲೇ ಸರಿಪಡಿಸಲು ಮೇಲಾಧಿಕಾರಿಗಳಿಗೆ ಮಾಹಿತಿ ಸಲ್ಲಿಸಲು ಸಮಿತಿಯ ಅಧ್ಯಕ್ಷರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು. ಗೃಹಜೋತಿ ಫಲಾನುಭವಿಗಳಿಗೆ ಸರಿಯಾಗಿ ಯೋಜನೆಯ ಪ್ರಯೋಜನ ತಲುಪಲು ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು. ಗೃಹಜ್ಯೋತಿ, ಶಕ್ತಿ ಯೋಜನೆ, ಯುವ ನಿಧಿ, ಅನ್ನಭಾಗ್ಯ ಯೋಜನೆಗಳ ಕುರಿತು ತಾಲೂಕ ಮಟ್ಟದ ಅಧಿಕಾರಿಗಳುವರದಿಮಂಡಿಸಿದರು. ಬರುವ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಫಲಾನುಭವಿಗಳ ಸಮಾವೇಶ ಜರುಗಲಿದ್ದು ಇಲಾಖೆಯ ಅಧಿಕಾರಿಗಳು ತಮ್ಮ ಫಲಾನುಭವಿಗಳನ್ನು ಗ್ರಾಮವಾರು ಸಮಾವೇಶಕ್ಕೆ ಕರೆತರುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

5 ಗ್ಯಾರಂಟಿ ಯೋಜನೆಗಳ ಪ್ರತಿ ಫಲಾನುಭವಿಗೆ ತಲುಪುವಂತೆ ಹಾಜರಿದ್ದ ಎಲ್ಲಾ ಸದಸ್ಯರು, ಅನುಷ್ಠಾನ ಅಧಿಕಾರಿಗಳಿಗೆ ಸಭೆಯ ಅಧ್ಯಕ್ಷರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾದ ಮಂಜುನಾಥ ಗೊಂಡಬಾಳ, ತಾಲೂಕ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಸಮಿತಿಯ ಸರ್ವ ಸದಸ್ಯರು, 5 ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧಿಕಾರಿಗಳು ಹಾಜರಿದ್ದರು.

## ನಾಳೆಯಿಂದ ವಿವಿಧ ಸ್ಪರ್ಧೆಗಳು: ಬೆನಕಟ್ಟಿಯಲ್ಲಿ ಇಂದು ವೇಮನರ ಜಾತ್ರೆ


ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.18:ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ತತ್ವಜ್ಞಾನಿ, ಮಹಾಯೋಗಿ ವೇಮನರ 613 ನೇ ಜಯಂತ್ಯೋತ್ಸವದ ಅಂಗವಾಗಿ ಜ.19 ರಂದು ವೇಮನರ ಜಾತ್ರೆ ಜರುಗಲಿದೆ.

ರವಿವಾರ ಬೆಳಿಗ್ಗೆ ಸುಪ್ರಭಾತ, 7 ಗಂಟೆಗೆ ಮಹಾಯೋಗಿ ವೇಮನರ ಮೂರ್ತಿಗೆ ಅಭಿಷೇಕ, ಪೂಜಾ ಕೈಂಕರ್ಯಗಳು ನಡೆಯಲಿವೆ. ನಂತರ 10 ಗಂಟೆಗೆ ವೇಮನರ ಉತ್ಸವ ಮೂರ್ತಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ.

ಡೊಳ್ಳು, ಬಾಜಾ ಭಜಂತ್ರಿ ಸೇರಿ ವಿವಿಧ ಕಲಾ ತಂಡಗಳು, ಕಳಾಸರತಿ ಹಿಡಿದ ಮಹಿಳೆಯರು ಮೆರವಣಿಗೆಗೆ ಸಾಥ್ ನೀಡಲಿದ್ದಾರೆ. ಸಾಯಂಕಾಲ 4 ಗಂಟೆಗೆ ಕಳಸದ ಮೆರವಣಿಗೆ ನಡೆದು, 5–30 ಗಂಟೆಗೆ ವೇಮನರ ರಥೋತ್ಸವ ಜರುಗಲಿದ್ದು, ರಾತ್ರಿ 10–30 ಕ್ಕೆ 'ಹೆತ್ತವಳ ಹಾಲು ವಿಷವಾಯ್ತು' ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ವಿವಿಧ ಸ್ಪರ್ಧೆಗಳು: ಜಾತ್ರೆಯ ಅಂಗವಾಗಿ ಜ.20 ರಿಂದ 23 ರವರೆಗೆ ವಿವಿಧ ಸ್ಪರ್ಧೆಗಳನ್ನು



ಆಯೋಜಿಸಲಾಗಿದೆ.

ಜ.20 ಸೋಮವಾರ ಮುಂಜಾನೆ 10 ಗಂ–ಟೆಗೆ ರಾಧಾಕೃಷ್ಣನ್ ಶಿಕ್ಷಕರ ಬಳಗದಿಂದ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, 10–30 ಕ್ಕೆ ಜೈ ಹನುಮಾನ ಯುವಕ ಮಂಡಳದಿಂದ 55ಎಚ್‌ಪಿ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ, ವೇಮ ಯುವಕಮಂಡಳದಿಂದ ಲುಡೋ ಕಿಂಗ್ ಸ್ಪರ್ಧೆ ಏರ್ಪಡಿಸಲಾಗಿದೆ. ಸಾಯಂಕಾಲ ಜಂಗೀ ಕುಸ್ತಿಗಳು ನಡೆಯಲಿದ್ದು, ರಾತ್ರಿ ನಾಟಕ ಪ್ರದರ್ಶನ ನಡೆಯಲಿದೆ.

ಜ.21 ಮಂಗಳವಾರ ಮುಂಜಾನೆ 10 ಗಂಟೆಗೆ ಮಲ್ಲಿಕಾರ್ಜುನ ಯುವಕ ಸಂಘದಿಂದ ಜೋಡು ಎತ್ತಿನ ಸುತ್ತಿನ ಬಂಡಿ ಸ್ಪರ್ಧೆ, ವೇಮ ಯುವಕಮಂಡಳದಿಂದ ಸಂಗ್ರಾಣಿ ಕಲ್ಲು ಸಿಡಿ ಎತ್ತುವ ಸ್ಪರ್ಧೆ, ಪುರುಷರ ಬಂಡಿ ಜಗ್ಗುವ ಸ್ಪರ್ಧೆ, ಮಹಿಳೆಯರಿಂದ ಮನರಂಜನೆ ಕಾರ್ಯಕ್ರಮ ಹಾಗೂ ಸಂಜೆ ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮ ನಡೆಯಲಿವೆ.

ಜ.22 ಬುಧವಾರ ಮುಂಜಾನೆ 9 ಗಂಟೆಗೆ ಹೇಮ ವೇಮ ಡಿಜಿಟಲ್ ಕಮೀಟಿ ವತಿಯಿಂದ ರಸಪ್ರಶ್ನೆ ಸ್ಪರ್ಧೆ, 10 ಗಂಟೆಗೆ ವೇಮ ಯುವಕ ಮಂಡಳದಿಂದ 1 ನಿಮಿಷದ ಬಂಡಿ ಓಡಿಸುವ ಸ್ಪರ್ಧೆ, 11 ಗಂಟೆಗೆ ಡಾ.ಬಾಬು ಜಗಜೀವನರಾಮ್ ಯುವಕ ಮಂಡಳದಿಂದ 27 ಎಚ್.ಪಿ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ, ಸಂಜೆ 6 ಗಂಟೆಗೆ ಹೇಮರಡ್ಡಿ ಮಲ್ಲಮಾಂಬೆ ಭಜನಾ ಮಂಡಳಿಯವರಿಂದ ರಾಜ್ಯಮಟ್ಟದ ಭಜನಾ ಸ್ಪರ್ಧೆ, ನಂತರ ಯಲ್ಲಾಲಿಂಗ ಯುವಕ ಸಂಘದಿಂದ ಟಗರಿನ ಕಾಳಗ ಸ್ಪರ್ಧೆಗಳು ನಡೆಯಲಿವೆ.

ಜ.23 ಗುರುವಾರ ಅಪ್ಪು ಅಭಿಮಾನಿ ಬಳಗದ ವತಿಯಿಂದ ಮುಂಜಾನೆ 10 ಗಂಟೆಗೆ ಸ್ಲೋ ಮೋಟಾರ್ ಸೈಕಲ್ ಸ್ಪರ್ಧೆ ನಡೆಯಲಿದ್ದು, ಸಾಯಂಕಾಲ ರಥದ ಕಳಸ ಇಳಿಯಲಿದೆ. ರಾತ್ರಿ ರಸಮಂಜರಿ ಕಾರ್ಯಕ್ರಮಗಳು ನಡೆಯಲಿವೆ.

## ಮೆದುಳಿಗೆ ವಿಶ್ರಾಂತಿ ನೀಡಲು ಸಂಗೀತ ಆಲಿಸಬೇಕು: ಚನ್ನಶೆಟ್ಟಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 18 : ಬೀದರ್ ಚಿಕ್ಕಪೇಟ ನಲ್ಲಿರುವ ಕನ್ನಡ ಭವನದಲ್ಲಿ ನಾದಬ್ರಹ್ಮ ಕಲಾ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಕನ್ನಡ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ

ಜಿಲ್ಲಾಮಟ್ಟದ ಸಂಗೀತೋತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧಕರಿಗೆ ಗೌರವ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಭಕ್ತಿ ಮತ್ತು ಸಂಗೀತದಲ್ಲಿ ಇರುವಂತಹ ಶಕ್ತಿ ಅದಮ್ಯವಾದದ್ದು, ಸಂಗೀತ ದಿಂದ ಆತ್ಮ, ತನು, ಮನ ಶುದ್ಧ ಹಾಗೆಯೇ ಮೆದುಳಿಗೆ ವಿಶ್ರಾಂತಿ ನೀಡಲು ಸಂಗೀತ ಆಲಿಸಬೇಕು ಸರ್ಕಾರದಿಂದ ಉತ್ತಮವಾದ ಸಹಕಾರ ಕಲಾವಿದರಿಗೆ ದೊರೆಯಲಿ ಹಾಗೂ ನಾದಬ್ರಹ್ಮ ಕಲಾ ಸಂಸ್ಥೆ ಮಲ್ಲಿಕಾರ್ಜುನ ಸ್ವಾಮಿ ಕಲಾವಿದರಿಗೆ ವೇದಿಕೆ ನಿಡುತಿರುವ ಅವರ ಅವರ ಕಲೆ ನಾಡಿಗೆ ಪಸರಿಸುವ ಕೆಲಸ ಶ್ಲಾಘನೀಯ ಎಂದು ಕನ್ನಡ ಸಾಹಿತ್ಯ ಪರಿಷತ್ತು ಸುರೇಶ್ ಚನ್ನಶೆಟ್ಟಿ ಎಂದು ನುಡಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀ ಡಾ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಶಿವನನ್ನು ವಲಿಸಿ ಕೊಳ್ಳಲು ಇರುವ ಸಾಧನ ದಲ್ಲಿ ಸಂಗೀತವು ಒಂದು ಮಾರ್ಗ, ದೀಪದಿಂದ ಹೇಗೇ ಮನೆ ಬೆಳಗುವದೋ ಹಾಗೆಯೇ ಸಾಹಿತ್ಯ ಮತ್ತು ಸಂಗೀತ ದಿಂದ ಮನಸ್ಸುಗಳು ಪ್ರಜ್ವಲಿಸಲಿ, ಸಂಗೀತ ಎನ್ನುವುದು ಪರಿಶ್ರಮ, ಭಕ್ತಿಯಿಂದ ಕಲಿಯಬೇಕು ಕಲೆಯಿಂದ ಸಂಬಂಧದ ಕೊಂಡಿ ಬೆಳೆಯುತ್ತದೆ, ನಮ್ಮ ಭಾಗದಲ್ಲಿ ಕಲಾವಿದರನ್ನ ರಾಜ್ಯ ಮಟ್ಟದ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕ ಮಾಡಬೇಕು, ಅಲ್ಲದೆ ಕಲಾವಿದರಿಗೆ ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನ ನಡೆಯಲು ಎಲ್ಲರು ಶ್ರಮಿಸಬೇಕು ಮಾತನಾಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ಮಲ್ಲಿಕಾರ್ಜುನ ಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ

ಸದಸ್ಯರು ಕರ್ನಾಟಕ ಜಾನಪದ ಅಕಾಡೆಮಿ ವಿಜಯಕುಮಾರ್ ಸೊನಾರೆ ಈ ಸಂದರ್ಭದಲ್ಲಿ

ಎಮ್ ಎಸ್ ಮನೋಹರ ಪ್ರಶಾಂತ್ ಶರಗರ ಈರಯ್ಯ ಸ್ವಾಮಿ ಶಾಂತಕುಮಾರ್ ಸ್ವಾಮಿ ಬಾವಗಿ ಈಶ್ವರಯ್ಯ ಕುಡಂಬ ಪುಂಡಲೀಕರಾವ್ ಪಾಟೀಲ್ ವಿರೇಶ ಸ್ವಾಮಿ ಚೆತನ ಸೋರಳಿ

ಸಂಗೀತ ಕಲಾವಿದರಾದ ಸಂಜು ಕುಮಾರ್ ಸ್ವಾಮಿ ದತ್ತಾನಂದ ಮಾಹರಾಜ ಅರವಿಂದ್ ಶಿಲವಂತ ಮಹಾದೇವ ಎಂಪಳ್ಳಿ ಸಂಜುಕುಮಾರ್ ಸ್ವಾಮಿ ಕುಂದಗೋಳ ದೀಪಕ ಚಿಟ್ಟವಾಡಿ ಸಂತೋಷ್ ರೆಡಿ ಸಂಗಮೇಶ ಬೆಲ್ದಾಳ ಕ–ಒಟಯ್ಯ ಸ್ವಾಮಿ ಮಾರುತಿ ಚಾಂಬಳ ಮಲ್ಲಿಕಾರ್ಜುನ ನಾಗಮಾರಪಳ್ಳಿ ಪವನ್ ಸ್ವಾಮಿ ಅನೇಕ ಕಲಾವಿದರು ಭಾಗವಹಿಸಿದ್ದರು. ಸಿದ್ದ–ರೋಡ ಭಾಲ್ಕೆ ಸ್ವಾಗತಿಸಿ ಯೋಗೆಂದ್ರ ಯದಲಾಪುರೆ ನಿರೂಪಿಸಿದರು ಸಕಲ ಸದ್ಭಕ್ತರು ಉಪಸ್ಥಿತರಿದ್ದರು.

## ಮನ್ನಳ್ಳಿ ಪಿಕೆಪಿಎಸ್: ಪನ್ನಾಳೆ ಬೆಂಬಲಿಗರ ಕೈಗೆ ಆಡಳಿತ ಚುಕ್ಕಾಣಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 18 : ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾಜಿ ಅಧ್ಯಕ್ಷ ಅನಿಲಕುಮಾರ ಪನ್ನಾಳೆ ಅವರ ಬೆಂಬಲಿಗರು ತಾಲೂಕಿನ ಮನ್ನಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಚುಕ್ಕಾಣಿ ಹಿಡಿದಿದ್ದಾರೆ.

ಸಂಘದ ಕಚೇರಿಯಲ್ಲಿ ಶುಕ್ರವಾರ (ಜ.17) ಜರುಗಿದ ಚುನಾವಣೆಯಲ್ಲಿ ಪನ್ನಾಳೆ ಬೆಂಬಲಿಗರಾದ ಸೂರ್ಯಕಾಂತ ವಗದಾಳೆ ಅಧ್ಯಕ್ಷರಾಗಿ ಮತ್ತು ರಾಮಲು ಹೊಕ್ರಾಣ(ಬಿ) ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

ಪನ್ನಾಳೆ ಅವರು ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸನ್ಮಾನಿಸಿ, ಅಭಿನಂದಿಸಿದರು. ರೈತರ ಸಮಸ್ಯೆಗೆ ಸ್ಪಂದಿಸಲು ಸಲಹೆ ನೀಡಿದರು.

ನಿರ್ದೇಶಕರಾದ ಸಂಗಪ್ಪ ಮಡಕಿ, ರಾವುಸಾಬ್ ಸಾವಜಿ, ಅರುಣರೆಡ್ಡಿ ಪಾಟೀಲ, ಪೂಜಾ ರಾಜಕುಮಾರ, ಗ್ರಾಮದ ಹಿರಿಯರಾದ ನಾಗೇಶ ಬೆಳಕೇರಿ, ವಿಜಯಕುಮಾರ ಗಣಾಪೂರ, ಆಜಂಅಲಿ ಸೌದಾಗರ, ಮಹೇಶ ಕೋಟೆ, ಸೂರ್ಯಕಾಂತ ಮಡಕಿ, ಖದೀರ್ ಯಾಕತಪೂರ, ಶಂಕರ ಬಾಬು ಮುಂತಾದವರು ಹಾಜರಿದ್ದರು.

## ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶ: ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ :ಜ.18: ಕರ್ನಾಟಕ ವಸತಿ ಶೀಕ್ಷಣ ಸಂಸ್ಥೆಗಳ ಸಂಘದ ಅಧೀನದ ಬೀದರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಡಾ.ಬಿ.ಆರ್ ಅಂಬೇಡ್ಕರ ಹಾಗೂ ಶ್ರೀಮತಿ ಇಂದಿರಾಗಾಂಧಿ ವಸತಿಶಾಲೆಗಳಲ್ಲಿ 2025–26ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಸ್ಥಾನಗಳನ್ನು ಭರ್ತಿ ಮಾಡಲು ಆನ್ ಲೈನ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಬೀದರ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದರ ಜಿಲ್ಲೆಯ ಯಾವುದೇ ಶಾಲೆಯಲ್ಲಿ ಪ್ರಸ್ತುತ ವರ್ಷದಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಈ ಶಾಲೆಗೆ ಅರ್ಜಿ ಸಲ್ಲಿಸುವ ಹಿಂದುಳಿದ ವರ್ಗದ 2ಎ,2ಬಿ,3ಎ ಮತ್ತು 3ಬಿ ಪ್ರವರ್ಗಗಳಿಗೆ ಸೇರಿರುವ ವಿದ್ಯಾರ್ಥಿಗಳ ವಾರ್ಷಿಕ ವರಮಾನ ರೂ. 1,00,000 ಒಳಗಿರಬೇಕು. ಎಸ್.ಸಿ, ಎಸ್.ಟಿ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳಿಗೆ 2,50,000 ಒಳಗಿರಬೇಕು. ಅರ್ಜಿಗಳನ್ನು ಹತ್ತಿರದ ವಸತಿ ಶಾಲೆಯಿಂದ ಅಥವಾ www.kreis.kar.nic.in ಈ ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಅರ್ಜಿಗಳನ್ನು ತುಂಬಿ ಹತ್ತಿರದ ವಸತಿ ಶಾಲೆಯ ಪ್ರಾಂಶುಪಾಲರಿಗೆ ದಿನಾಂಕ: 25–01–2025ರ ಸಂಜೆ 5:30 ರ ಒಳಗೆ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲಾ.

ಪ್ರವೇಶ ಪರೀಕ್ಷೆಯು ಆಯಾ ತಾಲ್ಲೂಕಾ ಕೇಂದ್ರಗಳಲ್ಲಿ ದಿನಾಂಕ: 15–02–2025 ರಂದು ಮಧ್ಯಾಹ್ನ 2.30 ಗಂಟೆಗೆ ನಡೆಸಲಾಗುತ್ತದೆ. ಪರೀಕ್ಷೆಗೆ 5ನೇ ತರಗತಿಯ ಹಿಂದಿ ವಿಷಯ ಹೊರತು ಪಡಿಸಿ ಉಳಿದ 5 ವಿಷಯಗಳಿಗೆ ತಲಾ 20 ಅಂಕಗಳ ಪ್ರಶ್ನೆಗಳು ಇರುತ್ತವೆ. ಅನ್‌ಲೈನ್ ಮೂಲಕ ತಾವು ಅಯ್ಕೆ ಮಾಡಿಕೊಂಡ ಶಾಲಾ ಆದ್ಯತೆಯಂತೆ ಮೇರಿಟ್ ಆಧಾರದ ಮೇಲೆ ಆಯ್ಕೆ ಪ್ರಕ್ರೀಯೆ ನಡೆಯುವುದರಿಂದ ಯಾವುದೇ ಸುಳ್ಳುವದಂತಿಗಳಿಗೆ ಸಾರ್ವಜನಿಕರುಕಿವಿಗೊಡಬಾರದು. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ವಸತಿ ಶಾಲೆ ಇಲ್ಲವೇ 7899998755, 9945196115, 9986850550 ಈ ಮೊಬೈಲ್ ನಂಬರಗಳಿಗೆ ಸಂಪರ್ಕಿಸಬಹುದುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಸ್ವಂತ ಖರ್ಚಿನಲ್ಲಿ ಶಾಲೆ ತೆರೆದು ಶೈಕ್ಷಣಿಕ ಕ್ರಾಂತಿಗೈದ ಫುಲೆ: ಕಟ್ಟಿಮನಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 18 : ಬ್ರಿಟಿಷ್ ಅಧಿಕಾರಿಯೊಬ್ಬರು ಕೊಟ್ಟ ಪುಸ್ತಕವೇ ಸಾವಿತ್ರಿಬಾಯಿ ಫುಲೆ ಅವರ ಓದಿಗೆ ಕಾರಣವಾಯಿತು. ಬಾಲ್ಯ ವಿವಾಹಕ್ಕೆ ಒಳಗಾಗಿದ್ದ ಸಾವಿತ್ರಿಬಾಯಿಯವರು ಅನೇಕ ವಿದ್ಯಾರ್ಥಿಗಳ ಬಾಳಿಗೆ ಬೆಳಕಾದರು. ತಮ್ಮ ಸ್ವಂತ ಖರ್ಚಿನಲ್ಲಿ ಶಾಲೆಯನ್ನು ತೆರೆದು ಬಹುದೊಡ್ಡ ಶೈಕ್ಷಣಿಕ ಕ್ರಾಂತಿಗೈದರೆಂದು ಗುಲಬರ್ಗಾ ವಿಶ್ವವಿದ್ಯಾಲಯದ ಕಲಬುರಗಿಯ ಸಿಂಡಿಕೇಟ್ ಸದಸ್ಯೆ ಡಾ. ಶ್ರೀದೇವಿ ಎಸ್. ಕಟ್ಟಿಮನಿ ತಿಳಿಸಿದರು.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಸಭಾಂಗಣದಲ್ಲಿ ಸಾಹಿತ್ಯರತ್ನ ಅಣ್ಣಾಭಾವು ಸಾಠೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಲೋಕಮಂಚ್ ಟ್ರಸ್ಟ್(ರಿ) ವತಿಯಿಂದ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಅವರ ಜನ್ಮಶತಮಾನೋತ್ಸವ ಅಂಗವಾಗಿ ತಾಂತ್ರಿಕ ವಿದ್ಯಾರ್ಥಿನಿಯರಿಗೆ ಗ್ರಾಮೀಣ ಕ್ರೀಡೆಗಳ ಸ್ಪರ್ಧೆ ಹಾಗೂ ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ನಾಲ್ಕು ಗೋಡೆಗಳ ಮಧ್ಯೆ ಇರುವ ಮಹಿಳೆಯರ ಬದುಕನ್ನು ವಿದ್ಯಾರ್ಜನೆಯೆಡೆಗೆ ಸೆಳೆದದ್ದೇ ಸಾವಿತ್ರಿಬಾಯಿ ಮತ್ತು ಜ್ಯೋತಿಬಾ ಫುಲೆಯವರ ಸಾಧನೆ. ಸಮಾಜದ ಚುಚ್ಚುನುಡಿಗಳನ್ನು, ಕ್ರೌರ್ಯವನ್ನು ಸಹಿಸಿಕೊಂಡು ಸಾಧನೆಗೈದ ದಿಟ್ಟ ಮಹಿಳೆ ಫುಲೆಯವರಾಗಿದ್ದಾರೆ ಎಂದು ಅವರ ಸಾಧನೆಗಳ ಮೇಲೆ ಬೆಳಕು ಚೆಲ್ಲಿದರು.

ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕಿ ಡಾ. ಸುರೇಖಾ ಮಾತನಾಡಿ 1848ರಲ್ಲಿ ಜ್ಯೋತಿಬಾ ಫುಲೆಯವರು ಶೈಕ್ಷಣಿಕ ಕೇಂದ್ರವನ್ನು ಪ್ರಾರಂಭಿಸಿ, ಸಾವಿತ್ರಿಬಾಯಿಯುವರಿಗೆ ಅಕ್ಷರ ಕಲಿಸಿ ಶಿಕ್ಷಣ ಕೇಂದ್ರದ ಉಸ್ತುವಾರಿ ವಹಿಸುತ್ತಾರೆ. ಆರಂಭದಲ್ಲಿ ಕೇವಲ 9 ಜನ ವಿದ್ಯಾರ್ಥಿಗಳು ಇರುತ್ತಾರೆ. ಹೆಣ್ಣುಮಕ್ಕಳು ವಿದ್ಯಾರ್ಜನೆಯಲ್ಲಿ ಮುಂದುವರೆಯಬಾರದೆನ್ನುವ ಅವರ ಕಾಳಜಿಯ ಫಲವಾಗಿ ಇಂದು ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತು. ಪಟ್ಟಭದ್ರ ಹಿತಾಸಕ್ತಿಗಳು ನೀಡಿದ ಕಿರುಕುಳ ಸಹಿಸಿಕೊಂಡು ಅಕ್ಷರ ಕಲಿಸಿ ಅಕ್ಷದವ್ವ ಆದರು. ಸಾವಿತ್ರಿಬಾಯಿಯವರ ಸೇವೆಯನ್ನು ಮೆಚ್ಚಿ ಬ್ರಿಟಿಷ್ ಸರ್ಕಾರ ಅವರಿಗೆ "ಮೊದಲ ಮಹಿಳಾ ಶಿಕ್ಷಕಿ" ಅನ್ನುವ ಬಿರುದು ಕೊಟ್ಟಿದ್ದರು. ಇಂತಹ ಮಹಾನ್ ವ್ಯಕ್ತಿಗಳ ಅದರ್ಶವನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರಾದ ವಿಜಯಕುಮಾರ ಎಸ್.ಜಾಧವ್ ಮಾತನಾಡಿ ಗ್ರಾಮೀಣ ಕ್ರೀಡೆಗಳು ಇಂದು ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ತಾಂತ್ರಿಕ ವಿದ್ಯಾರ್ಥಿಗಳಿಗೆ ಕ್ರೀಡೆಗಳಲ್ಲಿ ಅಭಿರುಚಿ ಹುಟ್ಟುವಂತೆ ಮಾಡಿದ ಟ್ರಸ್ಟ್‌ನವರಿಗೆ ಧನ್ಯವಾದ ಸಲ್ಲಿಸುತ್ತೇನೆ. ಕ್ರೀಡೆಯಿಂದ ಶಾರಿರಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಸುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಇ ಮತ್ತು ಸಿಇ ವಿಭಾಗದ ಮುಖ್ಯಸ್ಥರಾದ ಶೈಲಜಾ ಶಾಮರಾವ ಅವರು ಸ್ವಾಮಿ ವಿವೇಕಾನಂದ ಕುರಿತು ಮಾತನಾಡಿ ಜೀವನದಲ್ಲಿ ಮುಂದುವರೆಯಲು ಶಿಸ್ತು, ಸಮಯ ಪರಿಪಾಲನೆ, ಪರಿಶ್ರಮ ಮುಖ್ಯ. ಸ್ವಾಮಿ ವಿವೇಕಾನಂದರು ಯುವಸಮೂಹಕ್ಕೆ ಆದರ್ಶಪ್ರಾಯರಾಗಿದ್ದರು. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಕೆಲಸ ಮಾಡಬೇಕೆಂದು ಪ್ರತಿಪಾದಿಸಿದರು.

ಸಾಹಿತ್ಯರತ್ನ ಅಣ್ಣಾಭಾವು ಸಾಠೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಲೋಕಮಂಚ್ ಟ್ರಸ್ಟ್(ರಿ) ಅಧ್ಯಕ್ಷರಾದ ಎಂ.ಎಸ್. ಮನೋಹರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಟ್ರಸ್ಟ್ ಕಾರ್ಯದರ್ಶಿ ಪ್ರವೀಣಚಂದ್ರ ಮೀರಾಗಂಜಕರ್, ಶಿವಕುಮಾರ ಕಟ್ಟೆ, ಶ್ರೀಮತಿ ರಮ್ಯಕೃಷ್ಣ ಸೇರಿದಂತೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು. ಕೊನೆಯಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಟ್ರೋಫಿ ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

## ದಾಡಗಿ ಕ್ರಾಸ್‌ನ ರಸ್ತೆಯಲ್ಲಿ ಬಸವಣ್ಣನವರ ಕಂಚಿನ ಪ್ರತಿಮೆ ಸ್ಥಾಪಿಸಿ:ಮಾಜಿ ಶಾಸಕ ಪ್ರಕಾಶ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.18: ತಾಲೂಕಿನ ದಾಡಗಿ ಗ್ರಾಮದ ಮುಖ್ಯ ರಸ್ತೆಯ ತಿರುವು(ಕ್ರಾಸ್)ನಲ್ಲಿನ ವಿಶ್ವಗುರು ಬಸವಣ್ಣನವರ ಪ್ರತಿಮೆಯನ್ನು ವಿರೂಪಗೊಳಿಸಿದ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಜತೆಗೆ ಅದೇ ಸ್ಥಳದಲ್ಲಿ ಬಸವಣ್ಣನವರ ಕಂಚಿನ ಪ್ರತಿಮೆ ಸ್ಥಾಪಿಸಲು ಸರಕಾರ ಮುಂದಾಗಬೇಕು ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ಒತ್ತಾಯಿಸಿದ್ದಾರೆ.

ವಿಶ್ವಗುರು ಬಸವೇಶ್ವರರ ಪ್ರತಿಮೆ ಭಗ್ನ ಮಾಡಿರುವುದು ಅಕ್ಷಮ್ಯ. ಇಡೀ ಮನುಕುಲಕ್ಕೆ ಮಾನವತೆಯ ಸಂದೇಶ ಸಾರಿದ, ಸಮ ಸಮಾಜದ ಪರಿಕಲ್ಪನೆಯನ್ನು ಕಟ್ಟಿ–



ಕೊಟ್ಟ 12ನೇ ಶತಮಾನದ ಕ್ರಾಂತಿಪುರುಷ ಬಸವೇಶ್ವರರು ಜಗತ್ತಿಗೇ ಆದರ್ಶರಾಗಿದ್ದಾರೆ. ಇಂಗ್ಲೆಂಡ್‌ನಲ್ಲಿಯೂ ಬಸವಣ್ಣನವರ ಪ್ರತಿಮೆ ಸ್ಥಾಪಿಸಿ ಗೌರವಿಸಲಾಗಿದೆ. ಇಂಥ ಮಹಾಮಹಿಮರ ಪ್ರತಿಮೆ ಭಗ್ನಗೊಳಿಸಿರುವುದು ನಿಜಕ್ಕೂ ದುರ್ದೈವ.

ಬಸವೇಶ್ವರ ಪ್ರತಿಮೆ ವಿರೂಪಗೊಂಡು ಮೂರ್ನಾಲ್ಕು ದಿನಗಳು ಕಳೆದಿವೆ. ಆದರೂ ಕೂಡ ಇಲ್ಲಿಯ ವರೆಗೂ ಅಧಿಕಾರಿಗಳ ತಂಡ, ಪೊಲೀಸ್ ಇಲಾಖೆ ದುಷ್ಕರ್ಮಿಗಳನ್ನು ಬಂಧಿಸದಿರುವುದು ವಿಪರ್ಯಾಸ.

ಕೂಡಲೇ ಕಿಡಿಗೇಡಿಗಳನ್ನು ಪತ್ತೆ ಮಾಡಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಅದಲ್ಲದೇ ಬಸವಣ್ಣನವರ ಪ್ರತಿಮೆ ಇರುವ ರಸ್ತೆಯನ್ನು ಅಗಲೀಕರಣಗೊಳಿಸಿ ಅದೇ ಸ್ಥಳದಲ್ಲಿ ಬಸವಣ್ಣನವರ ಕಂಚಿನ ಪ್ರತಿಮೆ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಮುಂದಿನ ದಿನಗಳಲ್ಲಿ ಎಲ್ಲ ಮಹಾತ್ಮರ ಪ್ರತಿಮೆಗಳ ಬಳಿ ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸುವ ಕಾರ್ಯ ಆಗಬೇಕು ಎಂದು ಪ್ರಕಣೆಯ ಮೂಲಕ ಎಚ್ಚರಿಕೆ ನೀಡಿದ್ದಾರೆ.

## ಜ. 20 ರಂದು ರಾಷ್ಟ್ರೀಯ ವಿಚಾರ ಸಂಕಿರಣ

ಬೀದರ. ಜ. 18 : ಕರ್ನಾಟಕ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಆಡಿಟೋರಿಯಂ ಹಾಲ್‌ನಲ್ಲಿ ಜನವರಿ 20 ರಂದು ಬೆಳಿಗ್ಗೆ 10:30 ಗಂಟೆಗೆ ವಿಜನ್ ವಿಕಸಿತ ಭಾರತ @ 2047ರ ಅಂಗವಾಗಿ 'ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ' ಕುರಿತು ಒಂದು ದಿನದ ರಾಷ್ಟ್ರಿ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಗ್ರಂಥಪಾಲಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರ್ನಾಟಕ ಕಾಲೇಜಿನ ಗ್ರಂಥಪಾಲಕರು ಹಾಗೂ ಕಾರ್ಯಕ್ರಮದ ಆಯೋಜಕರಾದ ಡಾ.ಸೋಮನಾಥ ಮುದ್ದಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"ವಿಜನ್ ವಿಕಸಿತ್ ಭಾರತ್ @ 2047 ವೆಬ್ ಆಧಾರಿತ ಮಾಹಿತಿ ಸಂಪನ್ಮೂಲಗಳಿಗೆ ವಲಸೆ ಹೋಗುವಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವೃತ್ತಿಪರರಿಗೆ ಸವಾಲುಗಳು ಮತ್ತು ಅವಕಾಶಗಳು" ಈ ಕುರಿತು ವಿಚಾರ ಸಂಕಿರಣ ಜರುಗಲಿದೆ. ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಎಸ್.ಬಿರಾದಾರ ಆಗಮಿಸಲಿದ್ದಾರೆ. ವಿಶೇಷ ಉಪನ್ಯಾಸಕರಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ. ಸುರೇಶ ಜಂಗೆ ಆಗಮಿಸಲಿದ್ದಾರೆ. ಗೌರವ ಅತಿಥಿಗಳಾಗಿ ಕರಾಶಿ ಸಂಸ್ಥೆಯ ಉಪಾಧ್ಯಕ್ಷ ಬಿ.ಜಿ.ಶೆಟಕಾರ, ಕಾರ್ಯದರ್ಶಿ ಸತೀಶ ಪಾಟೀಲ, ಜಂಟಿಕಾರ್ಯದರ್ಶಿ ಶಿವಾನಂದ ಗಾದಗೆ ಆಗಮಿಸಲಿದ್ದಾರೆ. ಗ್ರಂಥಪಾಲಕರು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಡಾ. ಸೋಮನಾಥ ಮುದ್ದಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವಮಾನವ ಸಂದೇಶ ಸಾರಿದ ಲೌಕಿಕ ಕವಿ–ಸಂತೆಯೊಳಗಿದ್ದೇ ಸಂತನಾದ ಶ್ರೀ ವೇಮನ...

# ಇಂದು ಶ್ರೀ ಶ್ರೀ ವೇಮನರ 613ನೆಯ ಜಯಂತ್ಯೋತ್ಸವ

**(ವಿಶೇಷ ಲೇಖನ)**

ಮಹಾಯೋಗಿ ವೇಮನರು 15 ನೆಯ ಶತಮಾನದಲ್ಲಿ ತೆಲುಗು ನಾಡಿನಲ್ಲಿ ಅವತರಿಸಿದ ಈ ಭೂಮಂಡಲ ಕಂಡ ಅಪರೂಪದ ಶ್ರೇಷ್ಠ ಸಂತ ಕವಿ, ಪರಮಜ್ಞಾನಿಯಾಗಿದ್ದವರು.


ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ಮಹಾಯೋಗಿ ವೇಮನರು ಸ್ಮರಣೀಯರು. ಅವರು ತತ್ವಜ್ಞಾನಿಯಾಗಿ, ಯೋಗಿಯಾಗಿ, ದಾರ್ಶನಿಕರಾಗಿ, ಬಂಧುವಾಗಿ ನಮಗೆ ಕಾಣುತ್ತಾರೆ..

ಭವ್ಯ ಭರತ ಭೂಮಿಯಲ್ಲಿ ಸಾಧು–ಸಂತರು ಸತ್ಪುರುಷರು ಯೋಗಿಗಳೂ ಅವತರಿಸಿದ ನೆಲವನ್ನು ಪಾವನ ಕ್ಷೇತ್ರವನ್ನಾಗಿ ಮಾಡಿದ್ದಾರೆ. ಅಂತಹ ಮಹಾ ಸತ್ಪುರುಷರಲ್ಲಿ ಮಹಾಸಂತ ಯೋಗಿ ವೇಮನ ಒಬ್ಬರಾಗಿದ್ದಾರೆ. ಕ್ರಿ.ಶ.1421ರಲ್ಲಿ ಆಂಧ್ರಪ್ರದೇಶದ ಮುಗಚಿ ಪಲ್ಲಿಯ ಕೋಮಗಿರಿ ವೇಮ ಭೂಪಾಲ ಮತ್ತು ಮಲ್ಲಮಾಂಬೆ ಎಂಬ ದಂಪತಿಗಳ ಉದರದಲ್ಲಿ ವೇಮನರ ಜನನವಾಯಿತು. ರಾಜ ಕುಟುಂಬಕ್ಕೆ ಸೇರಿದ ವೇಮನ ಅವರು ವೈಭೋಗದ ಜೀವನವನ್ನು ತ್ಯಾಗಮಾಡಿ ಸಮಾಜದ ಸೇವೆಯಲ್ಲಿ ತೊಡಗಿಸಿಕೊಂಡು ಅಸ್ಪೃಶ್ಯತೆ, ಜಾತಿಪದ್ಧತಿ, ಅಸಮಾನತೆಯ ವಿರುದ್ಧದ ಹೋರಾಟದಲ್ಲಿ ಶ್ರೇಷ್ಠ ದಾರ್ಶನಿಕರಾಗಿ ಗುರುತಿ ಸಿಕೊಳ್ಳುತ್ತಾರೆ. ಮನುಕುಲದ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡ ಅವರ ತ್ಯಾಗ ಸದಾ ಸ್ಮರಣೀಯವಾದದ್ದು...

ಪಾಶ್ಚಾತ್ಯ ವಿದ್ವಾಂಸ ಸಿ.ಪಿ. ಬ್ರೌನ್ ಅವರು ವೇಮನ್ ಅವರನ್ನು ಇಡೀ ಜಗತ್ತಿಗೆ ಪರಿಚಯಿಸಿಕೊಟ್ಟರು. ಪ್ರತಿಯುಗದಲೂ ಅನಾಗರಿಕತೆ, ಅನ್ಯಾಯ ಅಸತ್ಯ, ಅಧರ್ಮ, ಹೆಚ್ಚಾದಾಗ ಜ್ಞಾನಿಗಳ ಮಾರ್ಗದರ್ಶನದಲ್ಲಿ ನಡೆದರೆ ಸಮಾಜ ಸುಭಿಕ್ಷವಾಗಿರುತ್ತದೆ.

ವೇಮನರು 15ನೇ ಶತಮಾನದಲ್ಲಿ ಆಂಧ್ರಪ್ರದೇಶದಲ್ಲಿ ವಚನಕಾರರಲ್ಲಿ ಶ್ರೇಷ್ಠ ವಚನಕಾರರು, ಕವಿಗಳು, ಸಮಾಜ ಚಿಂತಕರು ಮಾನವಕುಲದ ಏಳಿಗೆಗಾಗಿ ಶ್ರಮಿಸಿದವರು..

ಕನ್ನಡದಲ್ಲಿ ಸರ್ವಜ್ಞ.. ತಮಿಳಿನ ತಿರುವಳ್ಳರ್.. ಅವರಂತೆ ತೆಲುಗಿಗೆ ವೇಮನರು ವಚನಕಾರರು. ಮಹಾಕವಿ ಮಹಾಯೋಗಿ ಆಗಿದ್ದಾರೆ. ವೇಮನ ಸಿದ್ದಾಪುರ ಸಮೀಪದ ಕುಮಾರಗಿರಿ ಒಡಹುಟ್ಟಿದವರಿಂದ, ಸಂಬಂಧಿಕರಿಂದ ಅನಾದರಕ್ಕೆ ಗುರಿಯಾಗಿ ದುಶ್ಚಟಗಳ ದಾಸನಾಗುತ್ತಾನೆ. ಪರಸ್ತ್ರೀ ಸಂಘದಲ್ಲಿ ವಿಷಯಾಸಕ್ತನಾದ ವೇಮನು ಮನೆಯ ಸಂಪತ್ತೆಲ್ಲ ಹಾಳು ಮಾಡುತ್ತಾನೆ. ಅತ್ತಿಗೆ–ಯಾಗಿ ಬಂದ ಹೇಮರೆಡ್ಡಿ ಮಲ್ಲಮ್ಮ ವೇಮನ ಮನಸ್ಸನ್ನು ತಿದ್ದಿ ಸರಿದಾರಿಗೆ ತರುತ್ತಾಳೆ..




ವೇಮನು ತನ್ನ ಪ್ರೇಯಸಿಯ ನಗ್ನ ಶರೀರವನ್ನು ಕಂಡೊಡನೆ ಅವನೊಳಗೆ ಭಯಂಕರವಾದ ಜಿಗುಪ್ಸೆ ಅಸಹ್ಯ ಭಾವನೆ ಆವರಿಸಿ ಒಡನೆಯೇ ಗಾಬರಿಗೊಂಡು ಕಣ್ಮುಚ್ಚಿ

**"ತಾಯಿಯ ಗರ್ಭದಿಂದ ತಾಂಬರುವ ಸಮಯದಿ**
**ವಸ್ತ್ರಮಿಲ್ಲ, ತುದಿಗುಮಿಲ್ಲ.**
**ನಡುವೆ ಬಟ್ಟೆ ಉಡುವುದೇಕೆಂದು ತಿಳಿಯಿರಿ ವಿಶ್ವತೋಭಿರಾಮ ಕೇಳೋ ವೇಮಾ"**

ಎಂದು ತತ್ವಜ್ಞಾನ ಹೇಳುತ್ತ ತಾನೂ ನಗ್ನನಾಗಿ ವೈರಾಗಿಯಂತೆ ಕಾಲ್ತೆಗೆದು ಹೊರಟನು. ಮುಂದೆ ತನ್ನ ಸಾಧನೆಯಿಂದ ಮಹಾಯೋಗಿ ಆಗುವನು..

15 ನೇ ಶತಮಾನದಲ್ಲಿ ತನ್ನ ತ್ರಿಪದಿಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸರಿದಾರಿಗೆ ತರಲು ಯತ್ನಿಸಿದ ಮಹಾಯೋಗಿ ವೇಮನು ತೆಲುಗು ಭಾಷೆಯಲ್ಲಿ ಲೋಕಾನುಭವವನ್ನು ಸೇರಿಸಿ ಕಂಡಿದ್ದನ್ನು ಕಂಡಹಾಗೆ ಕವನಗಳನ್ನು ಕಟ್ಟುವ ಮೂಲಕ ಜನರ ತಪ್ಪು ಒಪ್ಪುಗಳನ್ನು ತಿಳಿಸಿ ಸರಿದಾರಿಗೆ ತರಲು ಯತ್ನಿಸಿದ್ದಾನೆ..

**"ಎಲೆಯ ಮೇಲೆ ಬರಹ ಎಲ್ಲರಿಗೂ ತಿಳಿವುದು ಹಸ್ತದೊಳಿಹ ಬರಹ ಹೇಳಬಹುದು. ಚರ್ಮದಡಿಯ ಬರಹ ಬ್ರಹ್ಮ ತಾನರಿವನ್ನೆ ವಿಶ್ವಧಾಭಿರಾಮ ಕೇಳೋ ವೇಮಾ"**

**"ಹಲ್ಲಿ ನುಡಿಯ ಕೇಳಿ ಜನರು ತಮ್ಮ ಕೆಲಸವೆಲ್ಲ ಸಫಲವೆಂದು ಸಂತಸಗೊಳ್ಳುವರು.**
**ಆಗದ ಕೆಲಸಕ್ಕೆ ತಮ್ಮ ಕರ್ಮವೆಂದೆನ್ನುವರು. ವಿಶ್ವಧಾಭಿರಾಮ ಕೇಳೋ ವೇಮಾ"**

ಅವರ ತತ್ವಪೂರಿತ ವಚನಗಳಲ್ಲಿ...

**"ತಂದೆ–ತಾಯರಲಿ ದಯೆ ತೋರದ ಪುತ್ರ ಹುಟ್ಟಲೇನು? ಮತ್ತೆ ಸತ್ತರೇನು? ಹುತ್ತದಲಿ ಗೆದ್ದಲು ಹುಟ್ಟುವೇ? ಸಾಯವೇ ವಿಶ್ವಧಾಭಿರಾಮ ಕೇಳೋ ವೇಮಾ"**

ತಂದೆ ತಾಯಿಯ ಸೇವೆ ಮಾಡದ ಮಗ ಹುಟ್ಟಿದರೇನು? ಸತ್ತರೇನು ? ಎಂದು ಕೇಳುವ ವೇಮನರೂ ಅಂತಹ ಮಕ್ಕಳನ್ನು ಗೆದ್ದಲು ಹುಳುಗಳು ಅಲ್ಲಿಯೇ ಹುಟ್ಟಿ ಅಲ್ಲಿಯೇ ಸಾಯುತ್ತವೆ. ಅವು ಯಾರಿಗೂ ಉಪಕಾರಿಯಲ್ಲವೆಂದು ವೇಮನರು ವಿವರಿಸಿದ್ದಾರೆ..

**"ತನಗೆ ಪ್ರಾಪ್ತಿಯಿರದೆ ದಾನವ ದೊರೆಯದು ದೈವನಿಂದೆ ಹುಚ್ಚುತನವು ತಾನೆ ? ಕರ್ಮ ಜೀವಿಗಳೆಲ್ಲ ಕರ್ಮವಂ ಅರಿಯರು**
**ವಿಶ್ವಧಾಭಿ ರಾಮ ಕೇಳು ವೇಮಾ"**

ಪ್ರಾಪ್ತಿಯಿದ್ದಲ್ಲಿ ಮಾತ್ರ ದಾನ ಸಿಗುವುದು. ಅದು ಇಲ್ಲದಿದ್ದಲ್ಲಿ ದಾನ ಸಿಗದು. ದಾನ ಸಿಗಲಿಲ್ಲವೆಂದು ಮೂರ್ಖರು ದೈವವನ್ನು ದೂರುವುರು ಇದು ಹುಚ್ಚುತನ. ಇದನ್ನು ಕರ್ಮಜೀವಿಗಳು ತಿಳಿಯಲಾರರು..

**"ಅಡವಿ ತಿರುಗಲು ಸಿಗನು ಆಗಸದೊಳಿಲ್ಲ. ಅವನಿ ತೀರ್ಥ ಯಾತ್ರೆ ಮಾಡಿದೊಳಿಲ್ಲ.**
**ಒಡಲ ಶುದ್ಧಿ ಮಾಡಿ ಒಡೆಯನ ಕಾಣಿರೋ...**
**ವಿಶ್ವಧಾಭಿ ರಾಮ ಕೇಳೋ ವೇಮಾ"**

ಮನಸ್ಸನ್ನು ಶುದ್ಧಿ ಮಾಡಿಕೊಂಡು ಜಗದೊಡೆಯನನ್ನು ಕಾಣಿರೋ... ಎಂದು ಹೇಳುತ್ತ ಸಮಾಜಕ್ಕೆ ಸಂದೇಶ ನೀಡಿದ್ದಾರೆ..

**ಜನನ–ಮರಣಗಳಿಗೆ ಸ್ವತಂತ್ರ ನಾನಲ್ಲ! ಮೊದಲು ಕರ್ತನಲ್ಲ ಕಡೆಗೂ ಅಲ್ಲ! ನಡುವೆ ಕರ್ತನೆನಲು ನಗೆ ಕೇಡು ಅಲ್ಲವೇ.!? ವಿಶ್ವದಾಭಿರಾಮಾ ಕೇಳು ವೇಮಾ.!!**

ಮನುಷ್ಯನಿಗೆ ಜನನವೂ ಅವನ ಕೈಯಲ್ಲಿಲ್ಲ, ಮರಣವೂ ಅವನ ಕೈಯಲಿಲ್ಲ. ಹೀಗಿದ್ದರೂ ಎಲ್ಲಾ ನಾನೇ ಮಾಡಿದ್ದೇನೆ ಎನ್ನುವ ಬಿಗುಮಾನ ಮಾತ್ರ ಅವನನ್ನು ಬಿಡುವುದೇ ಇಲ್ಲ...

**ಕಾಶಿ ಕಾಶಿ ಎಂದು ಕಾತರಿಸಿ ಹೋಹರು!! ಅಲ್ಲಿ ಇರುವ ದೇವ ಇಲ್ಲಿಲ್ಲವೇ.?**
**ಇರುವನಲ್ಲಿ ಇಲ್ಲಿ ಇರಲು ಶುದ್ಧ ಹೃದಯ.!**
**ವಿಶ್ವದಾಭಿರಾಮಾ ಕೇಳು ವೇಮಾ!!**

ಅವರ ಕೃತಿ"ವೇಮನ ಶತಕಲು"ಎಂದು ಕರೆಯಲಾಗುತ್ತಿದ್ದು, ಸಿ.ಪಿ.ಬ್ರೌನ್ ವೇಮನರ ಕವನಗಳನ್ನು 19 ನೆಯ ಶತಮಾನದಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ವೇಮನ ಸಾಹಿತ್ಯವು ಮನಸ್ಸಿಗೆ ಸಂತೋಷವನ್ನು ನೀಡುತ್ತವೆ. ಜೀವನದಲ್ಲಿ ಪ್ರತಿಕೂಲ ಪ್ರಸಂಗ ಬಂದಾಗ ಅವರ ಕವಿತೆಗಳು ಸಾಂತ್ವನ ಹೇಳುತ್ತವೆ. ಸಮಾಜದಲ್ಲಿ ದಿನನಿತ್ಯ ನಡೆಯುವ ಜಾತಿ ಸಂಘರ್ಷ, ಮೇಲು–ಕೀಳುಗಳ ತಾರತಮ್ಯ, ನೋವು ಕ್ರೌರ್ಯಗಳಿಗೆ ವೇಮನರ ಸಾಹಿತ್ಯದಲ್ಲಿ ಉತ್ತರವಿದೆ. ಹಣ, ಆಸ್ತಿ ,ಕಾಮ, ಹಿಂಸೆಗಳಿಂದ ನಮ್ಮ ಕೌಟುಂಬಿಕ ವ್ಯವಸ್ಥೆ ಅಸ್ತವ್ಯಸ್ತವಾಗುವ ರೂಢಿಗತ ಶೋಷಣೆಯನ್ನು ವೇಮನರು ಧಿಕ್ಕರಿಸಿದ್ದಾರೆ..ಎಲ್ಲಾ ಕಾಲಘಟ್ಟಕ್ಕೂ ಅನ್ವಯಿಸುವಂತೆ ವೇಮನರೂ ಕಾವ್ಯವನ್ನು ಬರೆದಿದ್ದಾರೆ. ತಪ್ಪು ಮಾಡುವವರಿಗೆ ಎಚ್ಚರಿಸಿದ್ದಾರೆ.. ಆದ್ದರಿಂದ ಅವರ ಕಾವ್ಯ ಎಲ್ಲ ಕಾಲಕ್ಕೂ ಎಲ್ಲ ಜನಾಂಗಕ್ಕೂ ಅನ್ವಯಿಸುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲಿರುವ ನ್ಯೂನ್ಯತೆಗಳನ್ನು ಎತ್ತಿ ತೋರಿಸುವುದಲ್ಲದೆ ಆ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಹೇಗೆ ಬದು ಕಬೇಕೆಂದು ವೇಮನರ ಕವಿತೆಗಳು ನಮಗೆ ಮಾರ್ಗದರ್ಶನ ನೀಡುತ್ತವೆ.. ಮೇಲು–ಕೀಳು, ಜಾತಿಪದ್ಧತಿಯನ್ನು ಖಂಡಿಸಿ ಎಲ್ಲರೂ ಸಮಾನರು ಎಂದು ಸಾರಿದರು.

ಆಗಿನ ಕಾಲದಲ್ಲಿ ಸ್ಥಳೀಯರ ಅಸೂಯೆಯ ಮಧ್ಯಯು ವೇಮನರು ವಿಶ್ವಕವಿಯಾಗಿದ್ದರು.

ಅನಂತಪುರ ಜಿಲ್ಲೆಯ ಕದಿರು ತಾಲ್ಲೂಕಿನ ಕಟಾರುಪಲ್ಲಿಯಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದ ವೇಮನರು ಕ್ರಿ.ಶ.1480 ರಲ್ಲಿ ಐಕ್ಯರಾದರು. ಅವರ ಸಮಾಧಿ ಈಗಲೂ ಅಲ್ಲಿದೆ. ಅದೊಂದು ಪುಣ್ಯಕ್ಷೇತ್ರವಾಗಿ, ಶ್ರದ್ಧಾಕೇಂದ್ರವಾಗಿ ಮಾರ್ಪಟ್ಟಿದೆ.

ಸರಕಾರ ಪ್ರತಿ ವರ್ಷ ಎಲ್ಲ ಇಲಾಖೆಗಳಲ್ಲಿ ಜನವರಿ 19 ರಂದು ವೇಮನರ ಜಯಂತಿ ಆಚರಿಸಲು 2018ರಲ್ಲಿ ಆದೇಶಿಸಿದೆ. ಇಂದು ನಾವೆಲ್ಲರೂ ಸಮಾಜದ ಒಳಿತಿಗಾಗಿ ಮುಂಬರುವ ಯುವ ಸಮುದಾಯಕ್ಕೆ ವೇಮನರ ಮೌಲ್ಯದ ನುಡಿಗಳು ಅವರ ಆದರ್ಶಗಳು ಮೈಗೂಡಿಸಿಕೊಂಡು ಮುನ್ನುಗ್ಗುವಾ ಎಂದು ಹೇಳುತ್ತ..

ಸರ್ವರಿಗೂ ವೇಮನ ಜಯಂತಿಯ ಶುಭಾಶಯಗಳು.. ಸಲ್ಲಿಸುವೆ.



**ವೀರಂತರೆಡ್ಡಿ ಜಂಪಾ**
**ಶಿಕ್ಷಕರು–ಸಾಹಿತಿಗಳು**
**ಸರಕಾರಿ ಪ.ಪೂ.ಕಾಲೇಜು ಬಾಲಕರ ಪ್ರೌಢಶಾಲೆ**
**ಹುಮನಾಬಾದ.**
**ಜಿ. ಬೀದರ**
**ಮೊ. 9448440633**

## ಪ್ರೇಕ್ಷಕರನ್ನು ರಂಜಿಸಿದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ 5 ದಿನಗಳ ಕಾಲ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಲ್ಯಾಣ ಕರ್ನಾಟಕ ದ್ವಿತೀಯ ಜಾಂಬೋರೇಟ್ ಕಾರ್ಯಕ್ರಮದಲ್ಲಿ ಮೂಡಬಿದರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿಧ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಅಲ್ಲಿ ನೆರೆದಿದ್ದ ವಿಧ್ಯಾರ್ಥಿಗಳನ್ನು ಹಾಗೂ ಪ್ರೇಕ್ಷಕರನ್ನು ಜನಮನ ಸೆಳೆಯುವಲ್ಲಿ ಯಶಸ್ವಿಯಾಯಿತು.

ಜಾಂಬೋರೇಟ್ ಕಾರ್ಯಕ್ರಮ ಉದ್ಘಾಟನೆ ನಂತರ ಆಳ್ವಾಸ್ ಶಿಕ್ಷಣ ಸಂಸ್ಥೆಯ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶ–ವಿದೇಶ, ಕಲೆ, ಸಂಸ್ಕೃತಿಯನ್ನು ಭವ್ಯ ವೇದಿಕೆ ಮೇಲೆ ಅನಾವರಣಗೊಳಿಸಿರುವದನ್ನು ಕಣ್ತುಂಬ ತುಂಬಿಕೊಂಡ ಜನರು ಸಂತಸಗೊಂಡು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಿರೂಪಕ ನಿತೇಶ ಮೈಕ್ ಹಿಡಿದು ವೇದಿಕೆಗೆ ಬರುತ್ತಿದ್ದಂತೆ ಇಡೀ ಜಿಲ್ಲಾ ಕ್ರೀಡಾಂಗಣದ ಚಿತ್ರಣವೇ ಬದಲಾವಣೆಗೆ ಸ್ಫೂರ್ತಿ ನೀಡಿತು, ಅವರು ಮಾತನಾಡಿ, ನಮ್ಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಮೋಹನ ಆಳ್ವಾ ಅವರು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಅವರಲ್ಲಿರುವ ಪ್ರತಿಭೆಗಳನ್ನು ಗುರುತಿಸಿ, ಅನುಭವಿ ತಂಡವನ್ನು ರಚಿಸಿ, ದೇಶ–ವಿದೇಶ ಕಲೆಗಳನ್ನು ತಾಲೀಮು ಮಾಡಿಸಿದ ಪರಿಣಾಮ ಇಂದು ನಾವೆಲ್ಲರೂ ಎಲ್ಲಾ ಭಾಗದಲ್ಲಿ ನಾಡಿನ ಕಲೆಯನ್ನು ಪ್ರದರ್ಶನ ಮಾಡುವ ಜೊತೆಗೆ ಉಳಿಸಿ ಬೆಳೆಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ, ಶಾಂತಿ ಮತ್ತು ಸೇವೆಗೆ ಹೆಸರಾದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಎಲ್ಲೆ ಕಾರ್ಯಕ್ರಮ ಮಾಡಿದರು, ಆಯುಕ್ತರಾದ ಪಿಜಿಆರ್ ಸಿಂಧ್ಯಾ ಅವರ ಮನವಿ ಮೇರೆಗೆ ನಾವೂ ಕೂಡ ಕಾರ್ಯಕ್ರಮ ಯಶಸ್ವಿಗೆ ಕೈ ಜೋಡಿಸಿದ್ದೇವೆ ಎಂದು ಹೇಳಿದರು. ಆಳ್ವಾಸ್ ವಿದ್ಯಾರ್ಥಿಗಳು ಮೊದಲು ವಿವಿಧ ಬಣ್ಣಗಳ ಉಡುಪು ಧರಿಸಿ, ಗೋ ಶಂಭೋ ಭರತನಾಟ್ಯ ಪ್ರದರ್ಶನ ನೀಡಿದರು, ಸಾಕ್ಷಾತ್ ಶಿವನೇ ಧರೆಗೆ ಇಳಿದು ನೃತ್ಯ ಮಾಡಿದ ಎಂಬ ಭಾವನೆ ಜನರಲ್ಲಿ ಮೂಡಿತು. ಇನ್ನೊಂದು ತಂಡ ಸಾಹಸ ಕ್ರೀಡೆಯಾದ ಮಲ್ಲಕಂಭ ಪ್ರದರ್ಶನ ನೋಡುಗರು ಕೆಲ ಕಾಲ ಮೈಮರೆತು ಚಪ್ಪಾಳೆ ತಟ್ಟಿ, ಅವರ ಸಾಧನೆಗೆ ಪ್ರೋತ್ಸಾಹ ನೀಡಿದರು. ವಿದ್ಯಾರ್ಥಿಗಳು–ವಿದ್ಯಾರ್ಥಿನಿಯರ ಸಮ್ಮಿಲನದ ದಾಂಡಿಯ, ರಾಸಲೀಲ ಕಲೆ ಪ್ರದರ್ಶನ, ಪ್ರೇಕ್ಷಕರನ್ನು ಸಂಗೀತ ಲೋಕಕ್ಕೆ ಕರೆದೊಯ್ಯುವಲ್ಲಿ ಕಲಾವಿದರು ಸಫಲರಾದರು.

ಮಣಿಪುರ ಸ್ಟಿಕ್ ಡಾನ್ಸ್ ಪ್ರದರ್ಶನದಲ್ಲಿ ಕಲಾವಿದರು ತೋರಿದ ಶಿಸ್ತು, ಸಮಯಪ್ರಜ್ಞೆ ಎಲ್ಲರನ್ನೂ ಆಕರ್ಷಿಸಿತು.

ಸೃಜನಾತ್ಮಕ, ಕತಕ್ ವರ್ಷದಾರೆ, ಪುರುಳಿಯೋ ಹಾಗೂ ಶ್ರೀಲಂಕಾ ಕ್ಯಾಂಡಿಯನ್ ಸೇರಿದಂತೆ ಇನ್ನೀತರ ಕಲೆಗಳನ್ನು ಪ್ರದರ್ಶಿಸಿದರು, ಗಿರಿ ಜಿಲ್ಲೆಯ ಜನರು ಕೂಡ ಕುತೂಹಲದಿಂದ, ಸಂಯಮ ಕಾಪಾಡಿಕೊಂಡು, ವೈಭವ ಕಾರ್ಯಕ್ರಮ ವಿಕ್ಷೀಸಿ, ಜಾಂಬೋರೇಟ್ ಕಾರ್ಯಕ್ರಮ ಸಂಘಟಕರಿಗೆ ಕೃತಜ್ಞತೆಗಳನ್ನು ತಿಳಿಸಿ, ಸಂತಸದಿಂದ ತೆರಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರ, ಭಾರತ್ ಸ್ಕೌಟ್ಸ್ ಗೈಡ್ಸ್ ಆಯುಕ್ತರಾದ ಪಿಜಿಆರ್ ಸಿಂಧ್ಯಾ, ಅಪರ ಜಿಲ್ಲಾಧಿಕಾರಿ ಶರಣಬಸಪ್ಪ, ಜಿ.ಪಂ ಸಿಇಓ ಲವೀಶ್ ಒರಾಡಿಯಾ ಸೇರಿದಂತೆ ನಾಡಿನ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಗಣ್ಯರು, ಜಿಲ್ಲಾ ಸಂಸ್ಥೆ ಅಧ್ಯಕ್ಷರಾದ ಸುರೇಶ ಸಜ್ಜನ್ ಸೇರಿದಂತೆ ಹಲವರು ವೈಭವ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

## ಗಿರಿ ಜಿಲ್ಲೆಯಲ್ಲಿ ಯುವ ಕವಿಗಳಿಗೆ ಪ್ರೋತ್ಸಾಹಿಸೋಣ: ಡಾ.ಸಿದ್ದರಾಜರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ,ಜ.18–ಯಾದಗಿರಿ ಕಲ್ಯಾಣ ಕರ್ನಾಟಕದ ಅತಿ ಹಿಂದುಳಿದ ಜಿಲ್ಲೆಯಾಗಿದ್ದು, ಆದರೂ ಈ ಜಿಲ್ಲೆಯಲ್ಲಿ ಕವಿಗಳ ಸಂಖ್ಯೆ ಹೆಚ್ಚು ಇರುವುದರಿಂದ ಈ ಭಾಗದಲ್ಲಿರುವ ಯುವ ಉತ್ಸಾಹಿ ಕವಿ ಕವಯತ್ರಿಯರಿಗೆ ಉತ್ತಮವಾದ ಭವಿಷ್ಯ ನಿರ್ಮಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಕರೆದುಯ್ಯುವ ಕಾರ್ಯವಾಗಬೇಕಾಗಿದೆ ಎಂದು ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಹಾಗೂ ತನಾರತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ಸಿದ್ದರಾಜರೆಡ್ಡಿ ಹೇಳಿದರು. ನಗರದ ಸರ್ಕಾರಿ ಪದವಿ ಮಹಾ ವಿದ್ಯಾಲಯದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ವಿಭಾಗ ಸರಕಾರಿ ಪದವಿ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಸಂಶೋಧನಾ ಕೇಂದ್ರ ಸಹಯೋಗದಲ್ಲಿ ಹಮ್ಮಿಕೊಂಡ ಚಕೋರ ವಿಚಾರ ಸಾಹಿತ್ಯ ವೇದಿಕೆ ಉದ್ಘಾಟನೆ, ಕವಿಗೋಷ್ಠಿ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

'ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಸಿದ್ಧರಾಮ ಹೊನ್ಕಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಚಕೋರ ಜನಮನ ತಲುಪಿಸುವ ಯೋಜನೆಯಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಸಾಹಿತಿ, ಕವಿಗಳಿಗೆ ಅವಕಾಶ ನೀಡಲಾಗುವುದೆಂದರು, ನಮ್ಮ ಜಿಲ್ಲೆಗೆ ನಾನು ಮೊದಲ ಅವಕಾಶ ನೀಡಿ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಕೃಷಿ ಮಾಡಲು ಅವಕಾಶ ಮಾಡಿ ಕೊಟ್ಟಿರತಕ್ಕಂತ ಸಾಹಿತ್ಯ ಬಳಗಕ್ಕೆ ನನ್ನ ಕೊಡುಗೆಯನ್ನು ನೀಡಲು ಬಯಸುತ್ತೇನೆ ಸಾಹಿತ್ಯ ಕೇವಲ ದಕ್ಷಿಣ ಕರ್ನಾಟಕ ಸೀಮಿತವಾಗದೆ ಕಲ್ಯಾಣ ಕರ್ನಾಟಕಕ್ಕೆ ಅತಿ ಹೆಚ್ಚು ಒಲವು ನೀಡೋಣ ಎಂದು ಯುವಕವಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ಚನ್ನಣ್ಣ ವಾಲೀಕಾರ ಬದುಕು–ಬರಹ ಕುರಿತು ವಿಶೇಷ ಉಪನ್ಯಾಸ ನೀಡುತ್ತ ಮಾತನಾಡಿದ ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲರವರು ವಾಲೀಕಾರರ ಜೀವನವೇ ಜಾನಪದ ಅವರೊಬ್ಬ ಶಸಕ್ತ ಕವಿ, ಮಹಾಕವಿ ಆಗಿದ್ದರೆ, ಬಂಡಾಯ ಚಳವಳಿ–ಸಾಹಿತ್ಯ ಹುಟ್ಟಿಗೆ ಕಾರಣ–ರಾದ ವಾಲೀಕಾರ ಅವರು ಸಾಹಿತ್ಯದ ಹಲವು ಪ್ರಕಾರಗಳಾದ ಕಾವ್ಯ, ಮಹಾಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರವಾಸ, ಜಾನಪದ, ಸಂಶೋಧನೆಯ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅಪರೂಪ ಅವು ಒಟ್ಟು ಸಾಹಿತ್ಯ ಸಮಾಜಿಕ, ತಳ ವರ್ಗದ, ಶೋಷಿತ ತುಡಿತದ ಅಂತರಂಗದ ನೋವನ್ನು ಸಾಹಿತ್ಯ ಮೂಲಕ ಹೊರ ಹಾಕಿದ ಮನುಷ್ಯ ಪ್ರಜ್ಞೆಯ ಕವಿ ಎಂದು ಅಭಿಮತ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಸುಭಾಶ್ಚಂದ್ರ ಕೌಲಗಿ ಮಾತನಾಡಿ ಚಕೋರ ಸಾಹಿತ್ಯ ಜಿಲ್ಲೆಯಲ್ಲಿ ಹೆಚ್ಚೆಚ್ಚು ಕಾರ್ಯಗಳು ಮಾಡಲಿ, ಡಾ. ಸಿದ್ದರಾಮ ಹೊನ್ಕಲ್ ರವರ ನೇತೃತ್ವದಲ್ಲಿ ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಯುವ ಕವಿಗಳಿಗೆ ತನು, ಮನ, ದನದಿಂದ **ಪ್ರೋತ್ಸಾಹಿಸಿ**, ಪುಸ್ತಕ ಪ್ರಕಟಿಸಿ ಕೊರುವವರಲ್ಲಿ ಜಿಲ್ಲೆಯಲ್ಲಿ ಮೊದಲಿಗರು, ಅತಿ ಹೆಚ್ಚು ಪುಸ್ತಕ ಬರೆದು ಹೆಸರುವಾಸಿಯಾಗಿರುವ ಹಿರಿಯ, ಖ್ಯಾತ, ಸಾಹಿತಿಗಳಾಗಿದ್ದಾರೆ,

ಇವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮ ಶ್ಲಾಘನೀಯವಾಗಿದೆ, ಯುವಕವಿಗಳು ಒಳ್ಳೆಯ ಕವನಗಳನ್ನು ಓದಿದರು ಹಿರಿಯ ಕವಿಗಳ ಕಾವ್ಯ ಅಧ್ಯಯನ ಮಾಡಲು ಸೂಚಿಸಿದರು, ಕವಿಗಳ ಕವನಗಳನ್ನು ವಿಮರ್ಶೆ ಮಾಡಿದರು.

ಕವಿಗೋಷ್ಠಿಯಲ್ಲಿ ಡಾ.ಭಾಗ್ಯವತಿ ಅಮರೇಶ್ವರ, ಗುರುಪ್ರಸಾದ ವೈದ್ಯ, ಡಾ.ನರಸಪ್ಪ ಚಿತ್ತಾಪೂರ, ಡಾ.ಎಸ್.ಎಚ್. ಮುದ್ನಾಳ, ಡಾ.ಶ್ರೀಶೈಲ ಪೂಜಾರಿ, ದೇವಿಂದ್ರ ಧೋತ್ರೆ ಕಿಲ್ಲನಕೇರಾ, ಶಿವು ಬಳಿಕಚಕ್ರ, ಸುಮಿತ್ರಾ, ಡಾ.ವೆಂಕಟೇಶ ಕೊಲ್ಲಿ, ಗೌರಿಶ್ವರಯ್ಯ, ಡಾ.ಕಮಲಮ್ಮ ಇಂದೂದರ ಸಿನ್ನೂರ, ಮರೆಪ್ಪ ಕೊಯಿಲೂರ, ದುರ್ಗಪ್ಪ ಪೂಜಾರಿ, ಶಿಲ್ಪ ಬಸವಂತಪುರ, ಸುವರ್ಣ ರಾಠೋಡ, ಸುನಂದಾ ಪಾಟೀಲ, ಶ್ರೀಕಾಂತ ನ ಸಲವಾಯಿ, ಮಲ್ಲಮ್ಮ ನಾಯ್ಕೋಡಿ, ಡಾ.ಭೀಮರಾಯ ಲಿಂಗೇರಿ, ಮುಂತಾದ ಯುವಕವಿಗಳು ಕವನ ವಾಚಿಸಿದರು ಗೀತಾ ಪ್ರಾರ್ಥಿಸಿದರು, ಡಾ.ಜಯದೇವಿ ಗಾಯಕವಾಡ ಸ್ವಾಗತಿಸಿದರು, ನಾಗಪ್ಪ ಮಾನೇದಾರ ನಿರೂಪಿಸಿದರು, ಬಸನಗೌಡ ಪಾಟೀಲ ಯಾಳಗಿ ವಂದಿಸಿದರು.

## ರಕ್ತದಾನದಿಂದ ಆರೋಗ್ಯದಲ್ಲಿ ಹೊಸ ಚೇತರಿಕೆ, ಚೈತನ್ಯ ಮೂಡುತ್ತದೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜ.18 : ಅಜೀಂ ಪ್ರೇಮ್‌ಜೀ ಸ್ಕೂಲ್ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಿಬಿರದಲ್ಲಿ ರಕ್ತದಾನದಿಂದ ಆರೋಗ್ಯದಲ್ಲಿ ಹೊಸ ಚೇತರಿಕೆ, ಮತ್ತು ಚೈತನ್ಯ ಮೂಡುತ್ತದೆ' ಎಂದು ರಕ್ತದಾನ ಶಿಬಿರದಲ್ಲಿ ಶಿಕ್ಷಕರಿಗೆ ಹಾಗೂ ಪಾಲಕರಲ್ಲಿ ಜಾಗೃತಿ ಮೂಡಿಸಲಾಯಿತು ಎಂದು ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿಗಳಾದ ಶ್ರೀಯುತ ಡಾ.ಸಂಜೀವಕುಮಾರ ಸಿಂಗ್ ರಾಯಚೂರ್‌ಕರ್ ಅವರು ಹೇಳಿದರು. ಯಾದಗಿರಿ ನಗರದ ವಡಗೇರಾ ರಸ್ತೆಯಲ್ಲಿ ಬರುವ ಅಜೀಂ ಪ್ರೇಮ್‌ಜೀ ಸ್ಕೂಲ್ ಸಂಯುಕ್ತಾಶ್ರಯದಲ್ಲಿ ಇಂದು ಜನವರಿ 17ರ ಶುಕ್ರವಾರ ರಂದು ಮಕ್ಕಳ ಕಲಿಕಾ ಮೇಳ ಹಾಗೂ ರಕ್ತದಾನ ಶಿಬಿರವನ್ನು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಕ್ತದಾನ ಮಹತ್ವದ ಕುರಿತು ಹೇಳುತ್ತಾ 'ರಕ್ತದಾನದಿಂದ ಆರೋಗ್ಯದಲ್ಲಿ ಹೊಸ ಚೇತರಿಕೆ, ಮತ್ತು ಚೈತನ್ಯ ಮೂಡುತ್ತದೆ' ಎಂದು ಶಿಕ್ಷಕರು ಮತ್ತು ಪಾಲಕರಲ್ಲಿ ಜಾಗೃತಿ ಮೂಡಿಸಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀಯುತ ಅನಿಲ್ ಎಸ್ ಅಂಗಡಿಕಿ ಅವರು ರಕ್ತದಾನದ ಮಹತ್ವದ ಕುರಿತು ಮನವರಿಕೆ ಮಾಡಿಕೊಟ್ಟರು. ಈ ಶಿಬಿರದಲ್ಲಿ 50 ಜನ ದಾನಿಗಳು ರಕ್ತದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ ಎಂದು ಹೇಳಿದರು.

ಜೊತೆಗೆ ಶಾಲೆಯ ಆವರಣದಲ್ಲಿ ಮಕ್ಕಳ ಕಲಿಕಾ ಮೇಳವನ್ನು ಆಯೋಜಿಸಲಾಗಿದ್ದು 1ರಿಂದ 10ನೇ ತರಗತಿಯವರೆಗಿನ ಎಲ್ಲಾ ಮಕ್ಕಳು ವಿವಿಧ ವಿಷಯಗಳಲ್ಲಿ ತಾವು ಕಲಿತ ವಿಷಯಾಂಶಗಳನ್ನು ಹಂಚಿಕೊಂಡರು. ಪೋಷಕರು ಮತ್ತು ಗಣ್ಯರು ಕಲಿಕಾ ಮೇಳದಲ್ಲಿ ಭಾಗವಹಿಸುವ ಮೂಲಕ ಮಕ್ಕಳ ಚಟುವಟಿಕೆಗಳನ್ನು ಕಣ್ತುಂಬಿಕೊಂಡರು ಎಂದು ತಿಳಿಸಿದರು. ಶಾಲಾ ವಾರ್ಷಿಕೋತ್ಸವದ ಮುಂದುವರೆದ ಭಾಗವಾಗಿ ನಾಳೆ 18–01–2025ರ ಶನಿವಾರ ಸಂಜೆ 5 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಿಕ್ಷಕರು ಹಾಗೂ ಪಾಲಕರು ಮತ್ತು ಇನ್ನಿತರರು ಉಪಸ್ಥಿತರಿದ್ದರು.

## 25 ರಿಂದ ಭಾರತೀಯ ಸಂಸ್ಕೃತಿ ಉತ್ಸವ

ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು ವರದಿ.

ಲಿಂಗಸೂಗೂರು ಪಟ್ಟಣದ ವೀರಶೈವ ವಿದ್ಯಾವರ್ಧಕ ಸಂಘದ ಬಸವೇಶ್ವರ ಪ್ರೌಢ ಶಾಲೆಯ ಸಭಾಂಗಣದಲ್ಲಿ ಮತನಾಡಿದ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂರಕ್ಷಕ ಬಸವರಾಜ ಪಾಟೀಲ ಸೇಡಂ ಕಲ್ಬುರ್ಗಿ ಯಲ್ಲಿ ನೆಡೆಯುವ 25 ರಿಂದ ಫೆಬ್ರುವರಿ 6ರವರೆಗೆ ನಡೆಯುವ ಭಾರತೀಯ ಸಂಸ್ಕೃತಿ ಉತ್ಸವ–ಸಹ ಛಾಪು ಮೂಡಿಸುವ ಮುಖಾಂತರ ಐತಿಹಾಸಿಕವಾಗಲಿದೆ.

ಸಂಸ್ಥೆ ಆರಂಭವಾದಾಗಿನಿಂದ ನಮ್ಮ ಸಂಸ್ಥೆಯಲ್ಲಿ ಶೈಕ್ಷಣಿಕ ಚಿಂತನ ಕೂಟ ಆಯೋಜಿಸಿಕೊಂಡು ಬರಲಾಗುತ್ತಿದೆ. ಇದರಿಂದ ಸಂಸ್ಥೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

ಅನೇಕ ಉಪಕುಲಪತಿಗಳು, ಶಿಕ್ಷಣ ತಜ್ಞರು, ಚಿಂತಕರು, ಹಾಗೂ ಪದ್ಮಶ್ರೀ ಪುರಸ್ಕೃತರು ಸುವರ್ಣ ಮುಹೂತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಈ ಸಂದರ್ಭದಲ್ಲಿ ಪಟ್ಟಣದ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದರು

## ಬಳ್ಳಾರಿ: ಎಸ್‌ಟಿಪಿ ಘಟಕ, ಮುಂಡರಿಗಿ ಕೈಗಾರಿಕಾ ಪ್ರದೇಶಕ್ಕೆ ಭೇಟಿ– ಪರಿಶೀಲನೆ ನಡೆಸಿದ ಉಪ ಲೋಕಾಯುಕ್ತ ನ್ಯಾ.ಬಿ.ವೀರಪ್ಪ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.18–ನಗರದ ಅನಂತಪುರರಸ್ತೆಯ 46 ಎಕರೆ ಪ್ರದೇಶದ ಎಸ್‌ಟಿಪಿ (ತ್ಯಾಜ್ಯ ನೀರು ಸಂಸ್ಕರಣಾ ಘಟಕ) ಮತ್ತು ಮುಂಡರಿಗಿ–2 ಹಂತ ಕೈಗಾರಿಕಾ ಪ್ರದೇಶಾಭಿವೃದ್ಧಿ ಕೇಂದ್ರಕ್ಕೆ ಕರ್ನಾಟಕ ಉಪ ಲೋಕಾಯುಕ್ತನ್ಯಾಯಮೂರ್ತಿ ಬಿ.ವೀರಪ್ಪ ಅವರು ಶುಕ್ರವಾರ ಬೆಳಿಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಅವರು, ಜೈವಿಕ ತಂತ್ರಜ್ಞಾನದ ಮೂಲಕ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಪುನಃ ಉಪಯೋಗ ಮಾಡಿಕೊಳ್ಳುವುದರಿಂದ ಪಾಲಿಕೆಗೆ ಆದಾಯ ಬರಲಿದೆ. ತ್ಯಾಜ್ಯ ನೀರನ್ನು ನಿಯಮಿತವಾಗಿ ಪರೀಕ್ಷಿಸಬೇಕು. ಅದರಿಂದ ಬಂದಂತಹ ಕೆಸರು ಮಣ್ಣನ್ನು ಕೃಷಿ ಚಟುವಟಿಕೆಗಳಿಗೆ ಉಪಯೋಗ್ಯವಾಗುವುದೇ ಎಂಬುದನ್ನು ಸಹ ಬಳಸಿ ಪರಿಶೀಲನೆ ಮಾಡಬೇಕು. ಯಾವುದೇ ಕಾರಣಕ್ಕೂ ಪರಿಸರಕ್ಕೆ ಹಾನಿಯಾಗಬಾರದು ಎಂದು ಹೇಳಿದರು.

ಕೈಗಾರಿಕಾ ತ್ಯಾಜ್ಯನೀರಿನ ಸಂಸ್ಕರಣೆಯು ಪ್ರತ್ಯೇಕ ಕೈಗಾರಿಕಾ ತ್ಯಾಜ್ಯನೀರಿನ ಸಂಸ್ಕರಣೆಯಲ್ಲಿ ಅಥವಾ ಒಳಚರಂಡಿ ಸಂಸ್ಕರಣಾ ಘಟಕದಲ್ಲಿ ಮಾಡಬೇಕು. ಈ ಭಾಗದಲ್ಲಿ ಹೆಚ್ಚಾಗಿ ಸ್ಪಾಂಜ್ ಐರನ್ ಕೈಗಾರಿಕೆಗಳು ಇದ್ದು, ತ್ಯಾಜ್ಯ ನೀರು ಸಂಸ್ಕರಣೆಗೆ ಅವರೇ ಮಾಡಿಕೊಳ್ಳುವಂತೆ ಸೂಚಿಸಬೇಕು ಎಂದು ಉಪ ಲೋಕಾಯುಕ್ತರು ನಿರ್ದೇಶನ ನೀಡಿದರು.

ಮುಂಡರಿಗಿ ಕೈಗಾರಿಕಾ ಪ್ರದೇಶದಲ್ಲಿ ತ್ಯಾಜ್ಯದ ನೀರು ನಾಲೆಗೆ ಹರಿಯುವುದನ್ನು ಕಂಡ ಉಪಲೋಕಾಯುಕ್ತರು, ತ್ಯಾಜ್ಯ ನೀರು ಹರಿಸುವ ಕೈಗಾರಿಕೆಗಳಿಗೆ ನೋಟಿಸ್ ಜಾರಿ ಮಾಡಬೇಕು. ಅಂತಹ ಕೈಗಾರಿಕೆಗಳನ್ನು ಕೂಡಲೇ ಕಾರ್ಯ ನಿಲ್ಲಿಸುವಂತೆ ಆದೇಶ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನರ ಆರೋಗ್ಯದ ಮೇಲೆ ತೀವ್ರಪರಿಣಾಮ ಬೀರಲಿದ್ದು, ಕೈಗಾರಿಕೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮೇಲೆ ಬೇಸರ ವ್ಯಕ್ತಪಡಿಸಿದರು. ಇದೇ ವೇಳೆ ಜಿಲ್ಲೆಯಲ್ಲಿ ಪರಿಸರವಾದಿಗಳು ಇಲ್ಲದಿರುವುದನ್ನು ಕಂಡು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪನಿಬಂಧಕರಾದ ಅರವಿಂದ.ಎನ್.ವಿ., ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ, ಡಿವೈಎಸ್ಪಿ ವಸಂತ ಕುಮಾರ್, ಜಿಲ್ಲಾ ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಸೋಮಶೇಖರ್, ತಹಶೀಲ್ದಾರ ಗುರುವಾರ, ಮಹಾನಗರಪಾಲಿಕೆ ಆಯುಕ್ತರು ಸೇರಿದಂತೆ ಇತರೆ ಅಧಿಕಾರಿಗಳು ಹಾಜರಿದ್ದರು.

## ಉಗ್ರಾಣ ನಿಗಮ ಮಂಡಳಿ ಕೇಂದ್ರಕ್ಕೆ ಉಪ ಲೋಕಾಯುಕ್ತ ನ್ಯಾ. ಬಿ.ವೀರಪ್ಪ ಅನಿರೀಕ್ಷಿತ ಭೇಟಿ ಪರಿಶೀಲನೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.18–ನಗರದ ಬಂಡಿಮೋಟ ಬಳಿಯ ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮಂಡಳಿ ಘಟಕ–2 ಕೇಂದ್ರಕ್ಕೆ ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಶುಕ್ರವಾರ ಅನಿರೀಕ್ಷಿತ ಭೇಟಿ ನೀಡಿ ಆಹಾರ ಧಾನ್ಯಗಳನ್ನು ವೀಕ್ಷಿಸಿದರು.

ಉಗ್ರಾಣದಲ್ಲಿ ಸ್ವಚ್ಛತೆ ಹಾಗೂ ಸರಿಯಾದ ನಿರ್ವಹಣೆ ಮಾಡದೇ ಇರುವುದನ್ನು ಕಂಡು ಬೇಸರ ವ್ಯಕ್ತಪಡಿಸಿದರು. ಉಗ್ರಾಣದಲ್ಲಿ ಸುಮಾರು 48 ಸಾವಿರ ಜೋಳದ ಚೀಲಗಳು (24 ಸಾವಿರ ಕ್ವಿಂಟಾಲ್) ಹುಳ ತುಂಬಿಕೊಂಡು, ಪುಡಿಗಟ್ಟಿರುವುದನ್ನು ಕಂಡು ಅಚ್ಚರಿ ವ್ಯಕ್ತಪಡಿಸಿದ ಉಪಲೋಕಾಯುಕ್ತರು, ಅಧಿಕಾರಿಗಳ ಬೇಜವಾಬ್ದಾರಿತನದಿಂದ ಬಡಜನರು ಸೇವಿಸುವ ಆಹಾರವು ನಷ್ಟಗೊಳ್ಳುತ್ತಿರುವುದಕ್ಕೆ ಸ್ವಯಂ ಪ್ರಕರಣ ದಾಖಲಿಸಿಕೊಳ್ಳುತ್ತೇವೆ ಎಂದರು.

ಈ ಸಂದರ್ಭದಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮಂಡಳಿ ಘಟಕ–2 ಕೇಂದ್ರದ ಅಧಿಕಾರಿ ಶರಾವತಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನಾ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ತಹಶೀಲ್ದಾರ ಗುರುರಾಜ ಸೇರಿದಂತೆ ಇತರರು ಇದ್ದರು.

### ಬ್ಯಾಂಕ್ ದರೋಡೆ ಪ್ರಕರಣ: ಬೆಮಳಖೇಡ ಗ್ರಾಮದ

## ಸಂತ್ರಸ್ತ ಕುಟುಂಬಕ್ಕೆ ಸಚಿವ ಈಶ್ವರ ಖಂಡ್ರೆ ಭೇಟಿ

ಮಲ್ಲಮ್ಮ ನುಡಿ ವಾರ್ತೆ

ಬೀದರ ಜನವರಿ.18– ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಇಂದು ಬ್ಯಾಂಕ್ ದರೋಡೆ ಸಂದರ್ಭದಲ್ಲಿ ದರೋಡೆಕೋರರ ಗುಂಡೇಟಿಗೆ ಬಲಿಯಾದ ಬೆಮಲಖೇಡ ಗ್ರಾಮದ ಗಿರಿ ವೆಂಕಟೇಶ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಸರಕಾರದ ಬ್ಯಾಂಕ್ ಹಣವನ್ನು ಕಾಪಾಡುವ ನಿಟ್ಟಿನಲ್ಲಿ ಬಲಿಯಾದ ಗಿರಿ ವೆಂಕಟೇಶ ಕುಟುಂಬಕ್ಕೆ ಸರಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ದೊರಕಬೇಕಾದ ಎಲ್ಲ ಸಹಾಯ ಸವಲತ್ತುಗಳನ್ನು ದೊರಕಿಸಿಕೊಡಲಾಗುವುದೆಂದು ಹೇಳಿದರು. ಅಲ್ಲದೇ ಮುಖ್ಯಮಂತ್ರಿಗಳೊಂದಿಗೆ ಈಗಾಗಲೇ ಚರ್ಚಿಸಲಾಗಿ ಕುಟುಂಬಕ್ಕೆ ಹೆಚ್ಚುವರಿಯಾಗಿ 10 ಲಕ್ಷರೂ.ಗಳನ್ನು ದೊರಕಿಸಲು ಕ್ರಮ ಕೈಗೊಳ್ಳಲಾಗುವುದು. ಸಮಾಜಕಲ್ಯಾಣ ಇಲಾಖೆಯಿಂದ 8 ಲಕ್ಷರೂ. ಪರಿಹಾರ ಹಾಗೂ ಅವರ ತಾಯಿಗೆ 5 ಸಾವಿರ ಮಾಸಾಶನ ಹಾಗೂ ಕುಟುಂಬದ ಸದಸ್ಯರೊಬ್ಬರಿಗೆ ಸಮಾಜ ಕಲ್ಯಾಣ ಇಲಾಖೆಯಡಿ ಹೊರಗುತ್ತಿಗೆ ಆಧಾರದಲ್ಲಿ ಉದ್ಯೋಗ ನೀಡಲಾಗುವದು ಎಂದು ಸಚಿವರು ತಿಳಿಸಿದರು.

ಈಗಾಗಲೇ ಹೈದ್ರಾಬಾದ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಿವಕುಮಾರ ಅವರ ಚಿಕಿತ್ಸೆ ವೆಚ್ಚ ಭರಿಸಲು ಸಹ ಕ್ರಮ ಕೈಗೊಳ್ಳಲಾಗುವುದೆಂದರು. ಸಮಾಜಕಲ್ಯಾಣ ಇಲಾಖೆಯಿಂದ ದೊರಬೇಕಾದ ಪರಿಹಾರ ಸಹಾಯಗಳನ್ನು ತಕ್ಷಣವೇ ಒದಗಿಸುವಂತೆ ಸ್ಥಳದಲ್ಲೇ ಉಪಸ್ಥಿತರಿದ್ದ ಉಪನಿರ್ದೇಶಕರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ ಹಾಗೂ ಗ್ರಾಮಸ್ಥರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾಶಾಸನ ಸಮಸ್ಯೆ ಸರಿಪಡಿಸಲು ಶಾಸಕ ಪ್ರಭು ಚವ್ಹಾಣ ಖಡಕ ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ವಯೋವೃದ್ಧರು, ವಿಕಲಚೇತನರು ಮತ್ತು ವಿಧವೆಯವರಿಗೆ ಸರ್ಕಾರದಿಂದ ನೀಡಲಾಗುವ ಮಾಶಾಸನ ವಿತರಣೆಯಲ್ಲಿ ಸಮಸ್ಯೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬರುತ್ತಿವೆ. ಕೂಡಲೇ ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಹಸೀಲ್ದಾರರು ಹಾಗೂ ಮತ್ತಿತರೆ ಅಧಿಕಾರಿಗಳಿಗೆ ಖಡಕ ಸೂಚಿಸಿದರು.

**ಪಡಿತರ ಸಮಸ್ಯೆ ಇತ್ಯರ್ಥಕ್ಕೆ ಸೂಚನೆ:**

"ಪಡಿತರ ಚೀಟಿಯಿದ್ದರೂ ನಮಗೆ ಪಡಿತರ ಸಿಗುತ್ತಿಲ್ಲವೆಂದು ಮಹಿಳೆಯರು ಅಹವಾಲು ಸಲ್ಲಿಸಿದರು. ಶಾಸಕರು ಪ್ರತಿಕ್ರಿಯಿಸಿ, ಪಡಿತರ ವಿತರಣೆಗೆ ಹೆಬ್ಬೆರಳು ಗುರುತು ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಕೆಲವರ ಗುರುತು ನೀಡಲು ಸಾಧ್ಯವಾಗುತ್ತಿಲ್ಲ. ಅಂಥವರಿಗೆ ಪಡಿತರ ಸಿಗುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆ. ಈ ರೀತಿಯ ಸಮಸ್ಯೆ ಎಲ್ಲ ಕಡೆಯಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ತಹಸೀಲ್ದಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು ಎಂದು ಹೇಳಿದರು."

**ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ**

"ಬೆಂಬ್ರಾ, ಕೋರೆಕಲ್, ಠಾಣಾಕುಶನೂರ, ಬಳತ್(ಬಿ), ಚಾಂದೋರಿ, ಬೇಡಕುಂದಾ ಸರ್ಕಾರಿ ಶಾಲೆಗಳಲ್ಲಿ ಉನ್ನತೀಕರಣ, ದುರಸ್ತಿ, ಶುದ್ದ ನೀರಿನ ಘಟಕ, ಒಹೆಚ್ಟಿ, ಸೋಲಾರ್ ಪೆನಲ್ ಅಳವಡಿಸುವ 14 ಲಕ್ಷದ ಕಾಮಗಾರಿಗಳು, ಅಂಗನವಾಡಿ ಕಟ್ಟಡ, ಸಿಸಿ ರಸ್ತೆ, ಸಮುದಾಯ ಭವನ, ಶೌಚಾಲಯ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು. ಇದೇ ವೇಳೆ ಸರ್ಕಾರಿ ಶಾಲೆ, ಅಂಗನವಾಡಿ ಕೇಂದ್ರ, ಪಶು ಆಸ್ಪತ್ರೆಗಳಿಗೆ ಭೇಟಿ ನೀಡಿದರು."

ಕಮಲನಗರ ತಾಲೂಕಿನ ಬೆಂಬ್ರಾ, ಕೋರೆಕಲ್, ಠಾಣಾಕುಶನೂರ, ನಿಡೋದಾ, ಬಳತ್(ಬಿ), ಚಾಂದೋರಿ, ಬೇಡಕುಂದಾ, ಲಕ್ಷ್ಮೀನಗರ ಸೇರಿದಂತೆ ವಿವಿಧೆಡೆ ಜ.17ರಂದು ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ಹಲವು ಗ್ರಾಮಗಳಲ್ಲಿ ವಯೋವೃದ್ಧ ಮಹಿಳೆಯರು ಶಾಸಕರನ್ನು ಭೇಟಿ ಮಾಡಿ ಸಾಕಷ್ಟು ದಿನಗಳಿಂದ ಮಾಶಾಸನ ನಿಂತು ಹೋಗಿದೆ. ಔಷಧ ಖರೀದಿಸಲು ಕೂಡ ದುಡ್ಡಿನ ಸಮಸ್ಯೆಯಾಗುತ್ತಿದೆ. ಮಾಶಾಸನ ಸಮಸ್ಯೆ ಸರಿಪಡಿಸಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಶಾಸಕರು ಗ್ರಾಮ ಸಂಚಾರದ ವೇಳೆ ಬಹಳಷ್ಟು ಗ್ರಾಮಗಳಲ್ಲಿ ಮಾಶಾಸನದ ಕುರಿತು ಹೆಚ್ಚಿನ ದೂರುಗಳು ಬರುತ್ತಿವೆ. ಈ ಸಮಸ್ಯೆಗೆ ಸಾಧ್ಯವಾದಷ್ಟು ಬೇಗ ಪರಿಹಾರ ಕಂಡುಕೊಳ್ಳಬೇಕು. ವಯೋವೃದ್ಧರು, ವಿಕಲಚೇತನರು ಹಾಗು ವಿಧವೆಯರು ನೆಮ್ಮದಿಯ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಹೇಳಿದರು.

ಬಯೋಮೆಟ್ರಿಕ್ ಮಾಡಿಸದ ಕಾರಣ ಬಹಳಷ್ಟು ಜನರ ಮಾಶಾಸನ ನಿಂತು ಹೋಗಿದೆ. ಅಂಥವರು ತಮ್ಮ ಬ್ಯಾಂ–ಕಿಗೆ ಆಧಾರ್ ಕಾರ್ಡ್, ಪಾಸ್‌ಬುಕ್‌ನೊಂದಿಗೆ ತೆರಳಿ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಿಸಿಕೊಳ್ಳಬೇಕು. ಬೇರೆ ರೀತಿಯ ಸಮಸ್ಯೆಗಳಿದ್ದರೆ ಕಛೇರಿಗೆ ಬಂದು ಸರಿಪಡಿಸಿಕೊಳ್ಳಬೇಕೆಂದು ಅಧಿಕಾರಿಗಳು ಸಾರ್ವಜನಿಕರಿಗೆ ತಿಳಿಸಿದರು.

ವಯಸ್ಸಾದವರು, ವಿಕಲಚೇತನರಿಗೆ ಓಡಾಡಲು ಸಮಸ್ಯೆಯಾಗುತ್ತದೆ. ಅಂಥವರು ಕಛೇರಿಗಳಿಗೆ ಅಲೆದಾಡುವಂತಾಗಬಾರದು. ಅವರ ಕೆಲಸಗಳನ್ನು ತಕ್ಷಣ ಮಾಡಿಸಿಕೊಡಬೇಕು. ಅವರ ಸಮಸ್ಯೆ ತಮ್ಮ ವ್ಯಾಪ್ತಿಗೆ ಬರದಿದ್ದಲ್ಲಿ ಸರಿಯಾದ ಮಾಹಿತಿ ನೀಡಬೇಕು. ಸಾಧ್ಯವಾದಷ್ಟು ಸಹಕರಿಸಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಅಮಿತಕುಮಾರ ಕುಲಕರ್ಣಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ, ಮುಖಂಡರಾದ ವಸಂತ ಬಿರಾದಾರ, ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ಅರಹಂತ ಸಾವಳೆ, ಶಿವರಾಜ ಅಲ್ಮಾಜೆ, ಕಾಶಿನಾಥ ಜೀರ್ಗೆ, ಉಮಾಕಾಂತ ಪಾಟೀಲ, ಶಿವಾನಂದ ಸಾವಳೆ, ವಿರೇಂದ್ರ ರಾಜಾಪೂರೆ, ಧನರಾಜ ವಡೆಯರ್, ಗಿರೀಶ ಒಡೆಯರ್, ಶಿವಾಂಜಯ ಬಿರಾದಾರ, ಧನರಾಜ ಬಾವಗೆ, ಓಂಕಾರ ಸ್ವಾಮಿ, ಶಿವಕುಮಾರ ಸಜ್ಜನಶೆಟ್ಟೆ, ಬಾಬುರಾವ ವಾಗ್ಮಾರೆ, ಉಮೇಶ ಜೀರ್ಗೆ, ಶಿವಲಿಂಗ ಪರಶೆಟ್ಟೆ, ಮಂಜು ಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

### ಪೂರ್ವಭಾವಿ ಸಭೆ ನಡೆಸಿದ ಸುರೇಶ ಸಜ್ಜನ :

## ಕಲ್ಯಾಣ ಕರ್ನಾಟಕ ವಿಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಕುರಿತು ಸಿದ್ಧತಾ ಸಭೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಜ:18–ಸಮಯ ಪರಿಪಾಲನೆ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಕಾರ್ಯಕ್ರಮಕ್ಕೆ ಅತ್ಯಂತ ಮಹತ್ವವಾದ ಅಂಶವಾಗಿದೆ. ಮಕ್ಕಳನ್ನ ಒಳ್ಳೆ ನಾಗರಿಕನನ್ನಾಗಿ ಮಾಡಿ ಮಕ್ಕಳನ್ನು ಕರೆದು–ಕೊಂಡು ಬಂದದ್ದಕ್ಕೆ ತುಂಬಾ ಸಂತೋಷ. ಮಕ್ಕಳಿಗೆ ಹೆಚ್ಚಿನ ವಿಶೇಷ ಕಾಳಜಿ ವಹಿಸುತ್ತೇವೆ ಎಂದು ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಅಧ್ಯಕ್ಷ ಸುರೇಶ್ ಸಜ್ಜನ್ ಇಂದಿಲ್ಲಿ ಹೇಳಿದರು.

ನಗರದ ಡಾನ್ ಬಾಸ್ಕೋ ಶಾಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ, ಕಲ್ಯಾಣ ಕರ್ನಾಟಕ ಭಾಗದ ಉಸ್ತುವಾರಿಗಳು ಆದ ಮಲ್ಲೇಶ್ವರಿ ಜುಜಾರೆ ಅವರು ನಡೆಯುವ ಎರಡನೇ ಕಲ್ಯಾಣ ಕರ್ನಾಟಕದ ಜಾಂಬೂರಿ ಕಾರ್ಯಕ್ರಮವನ್ನು ತುಂಬಾ ಸುಸಜ್ಜಿತ ವ್ಯವಸ್ಥೆಯಲ್ಲಿ ನಡೆಸಿಕೊಂಡು ಹೋಗಬೇಕೆಂದು ಸ್ಕೌಟ್ ಮತ್ತು ಗೈಡ್ ಕ್ಯಾಪ್ಟನ್‌ಗಳಿಗೆ ಹಾಗೂ ಎಲ್ಲಾ ಶಿಕ್ಷಕರಿಗೆ ಸಲಹೆಯನ್ನು ನೀಡಿದರು.

ವಸತಿನಿಲಯದ ಪ್ರತಿಯೊಂದು ರೂಂ ಹಾಗೂ ಶೌಚಾಲಯಗಳು ತುಂಬಾ ಸ್ವಚ್ಛತೆ ಹಾಗೂ ಶಿಸ್ತುಬದ್ಧ ರೀತಿಯಲ್ಲಿ ಮಕ್ಕಳನ್ನು ನೋಡಿಕೊಳ್ಳಬೇಕೆಂದು ಎಲ್ಲಾ ಶಿಕ್ಷಕರಿಗೆ ಹೇಳಿದರು.

ನಾಳೆಯಿಂದ ಯಾವುದೇ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಉಪಹಾರ ಮಧ್ಯಾಹ್ನದ ಊಟ ಸಾಯಂಕಾಲದ ಉಪಹಾರ ಹಾಗೂ ರಾತ್ರಿಯ ಊಟವನ್ನು ಅಚ್ಚುಕಟ್ಟಾಗಿ ನಡೆಸಿಕೊಡಬೇಕೆಂದು ಸರ್ವರಲ್ಲಿ ಮನವಿ ಮಾಡಿಕೊಂಡರು.

ಮಕ್ಕಳಿಗಾಗಿ ಸುರಕ್ಷತೆಯನ್ನು ಕಲ್ಪಿಸಿಕೊಡಲು ಜಿಲ್ಲಾಧಿಕಾರಿ ಅವರು ತುಂಬಾ ಕಾಳಜಿ ವಹಿಸಿ ಪೋಲಿಸ್ ಬಂದೋಬಸ್ತು ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದು ಭರವಸೆಯನ್ನು ನೀಡಿದ್ದಾರೆ. ಅದಲ್ಲದೆ ಮಕ್ಕಳ ಸುರಕ್ಷತೆಗಾಗಿ ಆರೋಗ್ಯ ಸಿಬ್ಬಂದಿಯನ್ನು ಸಹ ಕಲ್ಪಿಸಲಾಗುವುದು ದಯವಿಟ್ಟು ಎಲ್ಲರೂ ಮಕ್ಕಳೊಂದಿಗೆ ಸಹಕರಿಸಿ ಎಂದು ಹೇಳಿದರು.

ಹೆದ್ದಾರಿ ದಾಟುವಾಗ ಸಮಯದಲ್ಲಿ ಮಕ್ಕಳ ಸುರಕ್ಷತೆಯನ್ನು ಕಾಪಾಡಿಕೊಳ್ಳಿ ಇದ್ದಕ್ಕೆ ಎಲ್ಲರೂ ಸಹಕರಿಸಿ ಎಂದು ಸಲಹೆಯನ್ನು ನೀಡಿದರು.

ಕಾರ್ಯಕ್ರಮವನ್ನು ಬಸವರಾಜ್ ಗೋಗಿ ಅವರು ನಿರೂಪಿಸಿ ವಂದಿಸಿದರು.

## ಹೆಚ್.ಎಸ್.ಕೆ ಪಾಲಿಟೆಕ್ನಿಕ್ ನಲ್ಲಿ ಕಾರ್ಯಗಾರ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಇಲ್ಲಿನ ಪ್ರತಿಷ್ಠಿತ ವೀ. ವಿ. ಸಂಘದ ಅಂಗ ಸಂಸ್ಥೆಯಾದ ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್‌ನಲ್ಲಿ ಗಣಕಯಂತ್ರ ವಿಭಾಗದ ವಿದ್ಯಾರ್ಥಿಗಳಿಗೆ ಜ.17 ಮತ್ತು 18 ರಂದು ಎರಡು ದಿನ ನುರಿತ ಸಂಪನ್ಮೂಲ ಪ್ರಾಧ್ಯಾಪಕರಿಂದ ಕಾರ್ಯಾಗಾರ ಆಯೋಜಿಸಲಾಗಿತ್ತು.

ಜ.17ರಂದು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಆಟೋಮೆಶನ್ ಟೂಲ್ಸ್ ಮತ್ತು ಜ.18ರಂದು ಬೇಸಿಕ್ಸ್ ಆಫ್ ಜಾವಾ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್ ಎನ್ನುವ ವಿಷಯಗಳ ಮೇಲೆ ಗಣಕಯಂತ್ರ ವಿಭಾಗದ ವಿದ್ಯಾರ್ಥಿಗಳಿಗೆ ಸಮಗ್ರ ಮತ್ತು ಸೂಕ್ತ ರೀತಿಯ ತರಬೇತಿ ನೀಡಲಾಯಿತು.

ಅಸೋಷಿಯೇಟ್ ಪ್ರೊಫೆಸರ್‌ಗಳಾದ ಡಾ.ಚಿದಾನಂದ ಹೆಚ್ ಮತ್ತು ರಾಕೇಶ್ ಕುಮಾರ್ ಎ ಇವರಿಂದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದ್ದು ಅತಿಥಿಗಳು ಗಿಡಕ್ಕೆ ನೀರುಣಿಸುವ ಮೂಲಕ ಕಾರ್ಯಗಾರಕ್ಕೆ ಚಾಲನೆ ನೀಡಿದರು.

ತರಬೇತುದಾರರು ಮಾತನಾಡಿ, ಇಂದಿನ ಯುಗದಲ್ಲಿ ಕೆಲಸ ಸಿಗುವುದು ಕಷ್ಟ. ವಿದ್ಯಾರ್ಥಿಗಳು ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ಯಾಂತ್ರೀಕೃತ ಸಾಧನಗಳನ್ನು ತಯಾರಿಸಿ ಹೆಚ್ಚಾಗಿ ಬಳಸುವಂತೆ ಸಾಮಾನ್ಯ ಜನರಿಗೆ ಇದರ ಬಗ್ಗೆ ತಿಳಿಯಲು ಮತ್ತು ಹೆಚ್ಚಾಗಿ ಬಳಸುವಂತೆ ಪ್ರೇರೇಪಿಸಬೇಕು. ಇಂದಿನ ಕಾಲಘಟ್ಟದಲ್ಲಿ ಬಳಕೆಯಾಗುವ ಮೊಬೈಲ್ ಮತ್ತು ಹಣಕಾಸು ವ್ಯವಹಾರ ನಿರ್ವಹಣೆಗೆ ಮತ್ತು ಗೇಮಿಂಗ್‌ಗೆ ಬಳಸುವ ಸಾಫ್ಟ್‌ವೇರ್ ತಯಾರಿಸಲು ಬೇಸಿಕ್ ಪ್ರೋಗ್ರಾಮಿಂಗ್ ಮತ್ತು ಜಾವ ಪ್ರೋಗ್ರಾಮಿಂಗ್ ತಿಳುವಳಿಕೆ ಎಷ್ಟು ಮುಖ್ಯ ಎನ್ನುವುದನ್ನು ವಿಸ್ತಾರವಾಗಿ ತಿಳಿಸಿದರು.

ಕಾಲೇಜಿನ ಅಧ್ಯಕ್ಷರಾದ ಪಲ್ಲೇದ ಪ್ರಭುಲಿಂಗರವರು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು. ಆಡಳಿತಮಂಡಳಿಯ ಸದಸ್ಯರಾದ ಬಾಣಾಪುರ ಜಡೆಸಿದ್ದನಗೌಡ, ಚಂದ್ರಶೇಖರ್ ಪಾಶ್ಚಾಪುರ್, ಪ್ರಾಂಶುಪಾಲರಾದ ಬಿ.ಶ್ರೀಶೈಲಗೌಡ, ಕಾಲೇಜಿನ ಗಣಕಯಂತ್ರ ವಿಭಾಗಾಧಿಕಾರಿ ಎಸ್.ನಾಗರಾಜ್ ಮತ್ತು ಎಲ್ಲಾ ವಿಭಾಗದ ಮುಖ್ಯಸ್ಥರು, ಸಿಬ್ಬಂದಿಗಳು ಹಾಜರಿದ್ದರು.

ಉಪನ್ಯಾಸಕಿ ಕುಮಾರಿ ಶ್ರೀರೇಖಾ ಕಾರ್ಯಕ್ರಮ ನಿರೂಪಿಸಿದರು. ಎಸ್.ನಾಗರಾಜ್ ಅತಿಥಿಗಳನ್ನು ಪರಿಚಯಿದರು. ವಂದನಾರ್ಪಣೆಯನ್ನು ಸಯ್ಯದ್ ಅಬ್ದುಲ್ ಗಫೂರ್ ಅವರು ನಡೆಸಿಕೊಟ್ಟರು.

## ಜಿ.ರುದ್ರಯ್ಯ ಅಧ್ಯಕ್ಷರಾಗಿ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಇತ್ತೀಚೆಗೆ ನಡೆದ ವೀರಶೈವ ವಿದ್ಯಾವರ್ಧಕ ಸಂಘದ ನೌಕರರ ಪತ್ತಿನ ಸಹಕಾರ ಸಂಘ (ನೀ) ಚುನಾವಣೆಯಲ್ಲಿ ಜಿ.ರುದ್ರಯ್ಯ ಅಧ್ಯಕ್ಷರಾಗಿ, ಗೋವಿಂದರಾಜ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾ ಅಧಿಕಾರಿ ರಾಮಾಂಜನೇಯು ರೆಡ್ಡಿಯವರು ಈ ಕುರಿತು ಮಾಹಿತಿ ನೀಡಿದ್ದು ನೂತನ ನಿರ್ದೇಶಕರಾದ ಗಿರಿ ಪ್ರಕಾಶ್ ಆರ್, ನಟರಾಜ್ ಟಿ ಎಚ್ ಎಂ ,ಶ್ರೀಕಾಂತ್ ಜಿ, ಶಿವಪ್ರಸಾದ್ ಜಿ, ವಿ ಎಂ ಸಾರಂಗ್ ಮಠ, ಮೃತ್ಯುಂಜಯ ಎಂ, ಅಮರೇಗೌಡ ಎನ್ ಪಾಟೀಲ್ ಅಭಿನಂದನೆಗಳನ್ನು

# ಚಿಣ್ಣರ ಕರ್ನಾಟಕ ದರ್ಶನಕ್ಕೆ ಮಹಿಪಾಲರೆಡ್ಡಿ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಸುರಪುರತಾಲೂಕಿನ ಕೆಂಭಾವಿ ವಲಯದ ಚಿಣ್ಣರ ಕರ್ನಾಟಕ ಪ್ರವಾಸ ದರ್ಶನಕ್ಕೆ ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿಂದು ಮಕ್ಕಳ ಪ್ರವಾಸಕ್ಕೆ ಮಾಜಿ ಪುರಸಭೆ ಸದಸ್ಯರಾದ ಶ್ರೀ ಮಹಿಪಾಲರೆಡ್ಡಿಡಿಗ್ಗಾವಿಅವರು ಚಾಲನೆ ನೀಡಿ ಪ್ರವಾಸಕ್ಕೆ ಶುಭಕೋರಿದ ಡಿಗ್ಗಾವಿ ಅವರು ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪ್ರವಾಸವು ಪೂರಕವಾಗಿದ್ದು, ತಾವು ವೀಕ್ಷಿಸಿದ ಸ್ಥಳಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ದಾಖಲಿಸಬೇಕೆಂದುಸೂಚಿಸಿದರು. ಈ ಸಂದರ್ಭದಲ್ಲಿ (ಸಿ ಆರ್ ಪಿ )ಬಂದೇನವಾಜ ನಾಲತವಾಡ,(ಇಸಿಒ) ಶಿವಪುತ್ರಪ್ಪ, ಎಚ್ ಎಮ್ ಎಮ್.ಬಿ ಪಾಟೀಲ,

ಕೆಆರ್ ಪಾಟೀಲ್,ಸಂಗೀತ ಶಿಕ್ಷಕ ಯಮನೇಶ ಯಾಳಗಿ, ಚಿತ್ರಕಲೆ ಶಿಕ್ಷಕ ಶಶಿಧರ,ರಂಗಪ್ಪ ವಡ್ಡರ ಸೇರಿದಂತೆ ಇತರರು ಹಾಜರಿದ್ದರು.

# ಆರ್ಥಿಕ ವರ್ಷದೊಳಗೆ ಅನುದಾನ ಸದ್ಬಳಕೆಯಾಗಲಿ : ಮೊಹಿಸಿನ್



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.18-2024-25ನೇ ಸಾಲಿನ ಆರ್ಥಿಕ ವರ್ಷ ಅಂತ್ಯವಾಗುವದರೊಳಗೆ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಮೊಹಮ್ಮದ ಮೊಹಿಸಿನ್ ಸೂಚಿಸಿದರು.

ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ಶನಿವಾರ ಜರುಗಿದ 4ನೇ ಮಾಸಿಕ ಕೆಡಿ ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆರ್ಥಿಕ ವರ್ಷ ಮುಗಿಯುವ ಮಾರ್ಚ ಅಂತ್ಯದೊಳಗೆ ಎಲ್ಲಾ ಇಲಾಖೆಗಳ ಮುಖ್ಯಸ್ಥರು ತಮಗೆ ನೀಡಿರುವ ವಿವಿಧ ಕಾಮಗಾರಿಗಳಿಗೆ ಬೇಕಾಗುವ ಅನುದಾನ, ಹೊರಗುತ್ತಿಗೆ ನೌಕರರಿಗೆ ಬೇಕಾಗುವ ಸಂಬಳದ ಅನುದಾನ ಸೇರಿದಂತೆ ಎಲ್ಲ ರೀತಿಯ ಅನುದಾನವನ್ನು ಖರ್ಚು ಮಾಡಬೇಕು. ಅನುದಾನ ಖರ್ಚು ಆಗದಿದ್ದಲ್ಲಿ ಬೇರೆ ಕಡೆ ವರ್ಗ ಆಗುವದರಿಂದ ಭೌತಿಕ ಪ್ರಗತಿ ಕುಂಠಿತಗೊಳ್ಳುತ್ತದೆ ಎಂದರು.

ಬರುವ ಫೆಬ್ರುವರಿ 22 ರಿಂದ 24 ರವರೆಗೆ ರನ್ನ ವೈಭವ ಉತ್ಸವ ಹಾಗೂ ಮಾರ್ಚ 1, 2 ಮತ್ತು 3 ರಂದು ಚಾಲುಕ್ಯ ಉತ್ಸವವನ್ನು ಜಿಲ್ಲಾಡಳಿತ ಜಿಲ್ಲಾ ಪಂಚಾಯತ್,ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಚರಿಸುತ್ತಿರುವುದು ಸಂತೋಷದ ವಿಷಯವಾಗಿದ್ದು, ಇನ್ನುಮುಂದೆ ಪ್ರತಿ ವರ್ಷ ಒಂದು ನಿರ್ಧಿಷ್ಟ ಪಡಿಸಿದ ದಿನಾಂಕದಂದೇ ಉತ್ಸವಗಳನ್ನು ಆಚರಿಸಿದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೂರದ ಬೆಂಗಳೂರು,ಮೈಸೂರು ಸೇರಿದಂತೆ ದಕ್ಷಿಣ ಕರ್ನಾಟಕದ ಪ್ರವಾಸಿಗರನ್ನು ನಮ್ಮ ಬಾದಾಮಿ, ಪಟ್ಟದಕಲ್ಲು, ಐಹೊಳೆ ಮುಧೋಳದತ್ತ ಸೆಳೆಯಬಹುದಾಗಿದೆ ಎಂದು ತಿಳಿಸಿದರು.

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶಕ್ಕೆ ಒತ್ತು ನೀಡಬೇಕು. ಸತತ ಮೂರು ವರ್ಷಗಳ ಕಾಲ ಯಾವ ಯಾವ ಶಾಲೆಯಲ್ಲಿ ಒಂದೇ ವಿಷಯದಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ ಎಂಬುದನ್ನು ತಿಳಿದು ಆ ವಿಷಯದ ಶಿಕ್ಷಕರಿಗೆ ತರಬೇತಿ ನೀಡಿ ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಬೇಕು ಎಂದರು.

ಪ್ರಮುಖವಾಗಿ ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಎಮ್‌ಆರ್‌ಐ ಸ್ಕ್ಯಾನಿಂಗ್ ಸೆಂಟರ್‌ಗಳ ಕೊರತೆ ಇರುವುದು, ಔಷಧಿಗಳ ಪೂರೈಕೆಯಲ್ಲಿ ವಿಳಂಬದ ವಿಷಯ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದು ಜಿಲ್ಲಾ ಆರೋಗ್ಯ ಅಧಿಕಾರಿ ಇವುಗಳತ್ತ ಗಮನ ನೀಡಬೇಕು. ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾದ ಹಾಸಿಗೆ ಹೊದಿಕೆ ನೀಡಿ ಸಮಸ್ಯೆ ನಿವಾರಿಸಬೇಕು ಹಾಗೂ ಕೆಎಮ್‌ಎಫ್‌ನ ಬಾಕಿ ಉಳಿಸಿಕೊಂಡ ಬಿಲ್ಲುಗಳನ್ನು ಬಗೆಹರಿಸಬೇಕು ಎಂದು ಹೇಳಿದರು.

ತೋಟಗಾರಿಕೆ, ಕೃಷಿ, ರೇಷ್ಮೆ ಪಂಚಾಯತ್ ರಾಜ್, ಆಯುಷ್, ಪಶುಪಾಲನೆ ಸೇರಿದಂತೆ ವಿವಿಧ ಇಲಾಖೆಗಳ ಮಾಸಿಕ ಗುರಿಸಾಧನೆಗಳ ಕುರಿತು ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಅವರೊಂದಿಗೆ ಚರ್ಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಮ್. ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ವೈಜ್ಞಾನಿಕ ಏರ ಬಲೂನ್: ಸಾರ್ವಜನಿಕರು ಭಯಭೀತರಾಗದಂತೆ ಜಿಲ್ಲಾಧಿಕಾರಿ ಸ್ಪಷ್ಟನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ;ಜನವರಿ.18:-ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಾಮೆಂಟಲ್ ರಿಸರ್ಚ ಹೈದ್ರಾಬಾದ ಅವರಿಂದ ದಿನಾಂಕ: 01-12-2024 ರಿಂದ 30-04-2025 ರವರೆಗೆ ಬಲೂನ್ ಫ್ಲೈಟ್‌ಗಳನ್ನು ಆಯೋಜಿಸಲಾಗಿದ್ದು, ಈ ಅವಧಿಯಲ್ಲಿ ಸುಮಾರು 10 ಬಲೂನ್ ಫ್ಲೈಟ್‌ಗಳನ್ನು ಸಂಶೋಧನೆಗಾಗಿ ವೈಜ್ಞಾನಿಕ ಉಪಕರಣಗಳನ್ನು ಒಯ್ಯುತ್ತಿವೆ. ಸುಮಾರು 20 ರಿಂದ 40 ಮೀಟರ್ ಉದ್ದದ ಹಗ್ಗದ ಮೇಲೆ ಉಪಕರಣಗಳು ಹೊಂದಿರುವ ಪ್ಯಾರಚೂಟ್ ಸಾಮಾನ್ಯವಾಗಿ ನಿಧಾನಗತಿಯಲ್ಲಿ ನೆಲಕ್ಕೆ ಬರುವ ಸಾಧ್ಯತೆವಿರುತ್ತದೆ. ಗಾಳಿಯ ದಿಕ್ಕನ್ನು ಅವಲಂಬಿಸಿ ಸದರಿ ಆಕಾಶ ಬುಟ್ಟಿಗಳು ಹೈದ್ರಾಬಾದ ಸುತ್ತಮುತ್ತಲಿನ ಪ್ರದೇಶ 200 ರಿಂದ 350 ಕಿ.ಮೀಟರ್ ಸ್ಥಳಗಳಿಗೆ ಇಳಿಯುವ ಸಾಧ್ಯತೆವಿರುತ್ತದೆ.

ಪ್ರಯುಕ್ತ ಬೀದರ ಜಿಲ್ಲೆಯ ಸಾರ್ವಜನಿಕರು ಯಾವುದೇ ಕಾರಣಕ್ಕೆ ಭಯಭೀತರಾಗದಂತೆ ತಿಳಿಸಿದೆ ಹಾಗೂ ಈ ವೈಜ್ಞಾನಿಕ ಉಪಕರಣಗಳು ನೆಲಕ್ಕೆ ಇಳಿದಿರುವುದನ್ನು ಕಂಡುಬಂದರೆ ತಮ್ಮ ಸಮೀಪದ ಪೋಲೀಸ್ ಠಾಣೆ ಅಥವಾ ತಹಸೀಲ್ ಅಥವಾ ಜಿಲ್ಲಾಡಳಿತ ಕಚೇರಿಗೆ ಸಂಪರ್ಕಿಸಲು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನವರಿ 20 ರಂದು ಕಮಲಾಪುರ ತಾಲೂಕು ಪಂಚಾಯತ್ ಕೆ.ಡಿ.ಪಿ. ಸಭೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.18-ಕಲಬುರಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯ ಕಮಲಾಪೂರ ತಾಲೂಕಿಗೆಗೆ ಸಂಬಂಧಿಸಿದ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯು ಇದೇ ಜನವರಿ 20ರಂದು ಬೆಳಿಗ್ಗೆ 11 ಗಂಟೆಗೆ ಕಲಬುರಗಿ ತಾಲೂಕು ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಕಲಬುರಗಿ ಗ್ರಾಮೀಣ ಮತಕ್ಷೇತ್ರದ ಶಾಸಕ ಬಸವರಾಜ ಬಿ. ಮತ್ತಿಮಡು ಇವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಕಮಲಾಪುರ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

# ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳ ಸಮ್ಮುಖದಲ್ಲಿ ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಜಿಲ್ಲೆ, ಹುಣಸಗಿ ತಾಲೂಕಿನಲ್ಲಿ ವಾಲ್ಮೀಕಿ ಜಾತ್ರೆ ನಿಮಿತ್ಯವಾಗಿ ರಾಜನಹಳ್ಳಿ ಪೀಠದ ಶ್ರೀಗಳಾದ ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳ ಸಮ್ಮುಖದಲ್ಲಿ ಪೂರ್ವಭಾವಿ ಸಭೆಯನ್ನು ಮಾಡಲಾಯಿತು

ಫೆಬ್ರುವರಿ 8 ಮತ್ತು 9 ರಂದು ನಡೆಯಲಿರುವ ರಾಜನಹಳ್ಳಿ ಜಾತ್ರಾ ಮಹೋತ್ಸವ ಅಂಗವಾಗಿ ರಾಜ್ಯದಂತ ಪ್ರವಾಸ ಕೈಗೊಂಡಿರುವ ಶ್ರೀ ಶ್ರೀ ಪ್ರಸಾನಂದಪುರಿಗಳು ಇಂದು ಹುಣಸಗಿಯಲ್ಲಿ ಸಭೆ ಮಾಡಲಾಯಿತು ಸಭೆಯನ್ನು ಉದ್ದೇಸಿಸಿ ಶ್ರೀಗಳು ಸಮಾಜದ ಅಭಿವೃದ್ಧಿಗಾಗಿ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತದೆ ಅನ್ನೋದರ ಬಗ್ಗೆ ಹಾಗೂ ಸಮಾಜ ಯಾವ ರೀತಿ ಒಗ್ಗಟ್ಟಾಗಬೇಕು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಎಲ್ಲಾ ಕ್ಷೇತ್ರದಲ್ಲೂ ಯಾವ ರೀತಿಯಾಗಿ ಒಗ್ಗಟ್ಟಾಗಬೇಕು ಎಲ್ಲಿ ಎಡವಿದ್ದೇವೆ ಅನ್ನುವುದರ ಬಗ್ಗೆ ಸಂಪೂರ್ಣವಾಗಿ ಎಳೆಎಳೆಯಾಗಿ ಬಿಡಿಸಿ ಹೇಳಿದರು ಅದೇ ರೀತಿಯಾಗಿ ನಮ್ಮ ರಾಜ್ಯದಲ್ಲಿ ನಾಲ್ಕನೇ ಜಾತಿ ಬಹುದೊಡ್ಡ ಜಾತಿ ಆಗಿದೆ ನಮ್ಮ ಸಮಾಜ ಅದಕ್ಕಾಗಿ ನಾವುಗಳು ಸರಕಾರಕ್ಕೆ ಸರ್ಕಾರದಲ್ಲಿ ಬರುವ ಸೌಲತ್ತುಗಳನ್ನು ತೆಗೆದುಕೊಳ್ಳಬೇಕೆಂದರೆ ಹಳ್ಳಿ ಹಳ್ಳಿಯಲ್ಲಿ ನಮ್ಮ ಸಮಾಜದ ಬಗ್ಗೆ ಅರಿವು ಮೂಡಿಸಬೇಕು. ಹಳ್ಳಿಯಿಂದ ದಿಲ್ಲಿಯವರೆಗೆ ಅನ್ನುವ ಹಾಗೆ ಸಮಾಜ ಒಗ್ಗಟ್ಟಾದರೆ ಮಾತ್ರ ಪ್ರತಿಯೊಂದು ಸರಕಾರದ ಸೌಲತ್ತುಗಳನ್ನು ಪಡೆಯಬಹುದು ಎಂಬುದಾಗಿ ಹೇಳಿದರು.

ಇದೆ ಸಂದರ್ಭದಲ್ಲಿ ಸಮಾಜದ ಹಿರಿಯರಾದ ಸಿದ್ದನಗೌಡ ಪಾಟೀಲ್ ಕರಿಬಾಯಿ. ಯಾದಗಿರಿ ಜಿಲ್ಲಾ ವಾಲ್ಮೀಕಿ ಅಧ್ಯಕ್ಷರಾದ ಗೌಡಪ್ಪ ಗೌಡ ಆಲ್ದಾಳ. ಹುಣಸಿ ತಾಲೂಕ ವಾಲ್ಮೀಕಿ ಅಧ್ಯಕ್ಷರಾದ ಬಸನಗೌಡ ಮಾಲಿಪಾಟೀಲ. ಸಮಾಜ ಚಿಂತಕರಾದ ಗುರುನಾಥ್ ಹುಲಿಕಲ್. ದೇವೇಂದ್ರಪ್ಪ ಬಳಿಚಕ್ರ. ತಾಲೂಕು ಪ್ರಧಾನ ಕಾರ್ಯದರ್ಶಿ ರಮೇಶ ದೊರೆ. ಕರ್ನಾಟಕ ರಕ್ಷಣಾ ವೇದಿಕೆ ತಾಲೂಕ ಅಧ್ಯಕ್ಷರಾದ ರಮೇಶ ಬಿರಾದಾರ. ಗೌರವಾಧ್ಯಕ್ಷರಾದ ಬಸವರಾಜ್ ಹವಾಲ್ದಾರ್. ಸಮಾಜದ ಮುಖಂಡರಾದ ಸೋಮಣ್ಣ ಮೇಟಿ. ದುರ್ಗೇಶ್ ಗೌಡ ಗೆದ್ದಲಮರಿ. ಹುಲುಗಪ್ಪ ಪಾಳೇಗಾರ. ಭೀಮನಗೌಡ ಬೈಲಾಪುರ. ಭೀಮರಾಯ ದೊಡ್ಡಮನಿ. ಬಸಂತ್ರಾಯ ಮೇಟಿ ಗುಳಬಾಳ ಹಾಗೂ ಹಲವಾರು ಸಮಾಜದ ಮುಖಂಡರ ಉಪಸ್ಥಿತರಿದ್ದರು.

# ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಸುರಪುರ : ಗರುಡದ್ರಿ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಪೂರ್ವ ಭಾವಿ ಸಭೆಗೆ ಆಗಮಿಸಿದ ವಾಲ್ಮೀಕಿ ಸಂಘದ ಅಧ್ಯಕ್ಷರಿಗೂ ಪದಾಧಿಕಾರಿಗಳಿಗೂ ಗೌರವಿಸಿ ಸನ್ಮಾನಿಸಿದರು

ನಂತರ ನೂತನ ವಾಲ್ಮೀಕಿ ಸಂಘದ ಅಧ್ಯಕ್ಷರಿಗೂ ಹಾಗೂ ನಗರ ಘಟಕದ ಅಧ್ಯಕ್ಷರಿಗೂ ಗುರುಗಳು ಗೌರವಿಸಿ ಆಶೀರ್ವದಿಸಿದರು

# 85 ಲಕ್ಷ ವೆಚ್ಚದ ಐದು ಶಾಲಾ ಕೋಣೆ,ಕಂಪೌಂಡ ಕಾಮಗಾರಿಗೆ ಭೂಮಿ ಪೂಜೆ.



ನಗರಸಭೆ ಸದಸ್ಯ ಹಣಮಂತ ನಾಯಕ ಮಾತನಾಡಿ, ನನ್ನ ವಾರ್ಡನಲ್ಲಿನ( ಮ್ಯಾಸಮ್ಮ ಗುಡಿ) ಶಾಲೆಗೆ ಕಳೆದ 17 ವರ್ಷಗಳ ಸಮಸ್ಯೆ ಇತ್ತು. ಅದನ್ನು ಶಾಸಕರ ಗಮನಕ್ಕೆ ತಂದಾಗ 54 ಲಕ್ಷ ರೂ. ಅನುದಾನ ನೀಡಿ ಹೊಸ ರೂಪ ನೀಡಿದ ಕೀರ್ತಿ ಸಲ್ಲುತ್ತದೆ. ಇಲ್ಲಿನ ಮಕ್ಕಳ ಬೇಡಿಕೆಯಂತೆಯೇ ಪ್ರೌಢ ಶಾಲೆ ಮಂಜೂರು ಮಾಡಿಸಬೇಕೆಂದು ಮನವಿ ಮಾಡಿದರು.

ಬಿಆರ್ ಸಿ ಮಲ್ಲಿಕಾರ್ಜುನ ಪೂಜಾರಿ, ಉತ್ತಮ ಶಾಲೆ ಇದೆ. ಇಲ್ಲಿನ ಸಮಸ್ಯೆಗಳ ಬಗ್ಗೆ ಶಾಸಕರು ಆದ್ಯತೆ ಮೆರೆಗೆ ಕೆಲಸ ಮಾಡಿದ್ದಾರೆ. ಆರನೇ ತರಗತಿಯಿಂದ ಆಂಗ್ಲ ಮಾಧ್ಯಮ ಶಾಲೆ ಇದೆ. ಹೆಚ್ಚಿನ ಮಕ್ಕಳು ಬರುವಂತೆಯೇ ಮಾಡಬೇಕು.

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಇಲ್ಲಿನ ವಾರ್ಡ ನಂ. 18ರ ಡಾ.ಅಂಬೇಡ್ಕರ್ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹೊಸ ಐದು ಕೋಣೆಗಳ ಹಾಗೂ ಕಂಪೌಂಡ ಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರು ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ಕೆಕೆಆರ್‌ಡಿಬಿ ಅನುದಾನದಡಿ 85 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಈ ಕಾಮಗಾರಿ ಗುಣಮಟ್ಟದಲ್ಲಿ ಮತ್ತು ನಿಗದಿತ ಸಮಯದಲ್ಲಿ ಮುಗಿಸಬೇಕೆಂದು ಹೇಳಿದರು. ಒಟ್ಟಾರೆ 1.10 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದರು.

ಶಿಕ್ಷಣದಿಂದಲೇ ಮಕ್ಕಳ ಸರ್ವಾಂಗಿಣ ಅಭಿವೃದ್ಧಿ ಸಾಧ್ಯ. ಕಾರಣ ಪಾಲಕರು ತಪ್ಪದೇ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಸೌಲಭ್ಯಗಳು ನೀಡಿದೆ, ಅದರ ಲಾಭ ಪಡೆದು ಜೀವನದಲ್ಲಿ ಯಶಸ್ಸಿ ಮೆಟ್ಟಿಲು ಮುಟ್ಟಬೇಕೆಂದರು. ಮಕ್ಕಳ ಸಂ-ಖ್ಯೆ ಹೆಚ್ಚಳ ಮಾಡಿ ಎಂದರು. ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯೆ ಬಸಮ್ಮ ಕುರಕುಂಬಳಿ, ಎಸ್ ಡಿಎಂಸಿ ಅಧ್ಯಕ್ಷ ಅಂಬರೀಶ ಚಟ್ಟರಕಿ, ಮಲ್ಲಿಕಾರ್ಜುನ ಈಟೆ, ಲಕ್ಷ್ಮಾರಡ್ಡಿ, ಪ್ರಶಾಂತ, ಮಲ್ಲಯ್ಯ ಈಟೆ, ಭೀಮಣ್ಣಾಕಾಗೆ, ಶರಣು ನಾಟಿಕಾರ, ಪರಶುರಾಮ ಒಡೆಯರ, ಎಂಜಿನಿಯರ್ ನಾಗೇಶ, ಮುಖ್ಯ ಗುರುಗಳಾದ ವಿಜಯಲಕ್ಷ್ಮಿ, ಶಿವು ಕರದಳ್ಳಿ, ವೆಂಕಟರಡ್ಡಿ, ಮಹೇಶ ಕುರಕುಂಬಳ, ಮಲ್ಲಿಕಾರ್ಜುನ ಪೂಜಾರಿ ಸೇರಿದಂತೆಯೇ ಇತರರಿದ್ದರು. ಬಿಆರ್ ಸಿ ವೆಂಕಟರಡ್ಡಿ ನಿರೂಪಿಸಿದರು.



ಚಿಟಗುಪ್ಪ:- ಪಟ್ಟಣದ ಪ್ರಸಿದ್ಧವಾದ ಸಲಾರೆ ಮಗದುಮ್ ದರ್ಗಾ ಜಾತ್ರೆಯ ನಿಮಿತ್ಯ ಪಟ್ಟಣದ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ, ಸಂಜೀವನ ಭೋಸ್ಲೆ, ಹಸನ್, ರಾಜಕುಮಾರ ಆರ್. ಹಡಪದ ದರ್ಗಾಕ್ಕೆ ತೆರಳಿ ದೇವರ ದರ್ಶನ ಪಡೆದರು. (ಮಲ್ಲಮ್ಮ ನುಡಿ ಚಿತ್ರ)

### ಬಾಲ್ಯ ವಿವಾಹ ಸಮಾಜದಲ್ಲಿ ದೊಡ್ಡ ಪೀಡಗು ಅದರಿಂದ ಜಾಗೃತರಾಗಿ

# ಬಾಲ್ಯ ವಿವಾಹ ಕಡಿವಾಣಕ್ಕೆ ಮುಂದಾಗಿ ಉಮೇಶ ಕೆ. ಮುದ್ನಾಳ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲೆಯಲ್ಲಿ ಜಿಲ್ಲಾಡಳಿತದಿಂದ ಬಾಲ್ಯ ವಿವಾಹ ತಡೆಲು ಸಾಕಷ್ಟು ಜಾಗೃತಿ ಮೂಡಿಸಿದರು ಕೂಡ ಸಾರ್ವಜನಿಕರು ತಮ್ಮ ತಮ್ಮ ಮಕ್ಕಳಿಗೆ ಇತ್ತಿಚಿನ ದಿನಗಳಲ್ಲಿ ಬಾಲ್ಯ ವಿವಾಹ ನಿರಂತರ ನಡೆ-ಯುತ್ತಿದ್ದು ದುರಷ್ಟಕರು ಸಂಗತಿ ಎಂದು ಕೋಲಿ ಸಮಾಜದ ಜನಜಾಗೃತಿ ಅಭಿಯಾನದಲ್ಲಿ ಕರ್ನಾಟಕ ಪ್ರದೇಶ ಕೋಲಿ ಸಮಾಜ ಹಾಗೂ ಸಾಮಾಜಿಕ ಹೋರಾಟಗಾರ ಉಮೇಶ ಕೆ ಮುದ್ನಾಳ ಬೇಸರ ವ್ಯಕ್ತ ಪಡಿಸಿದರು.

ತಾಲ್ಲೂಕಿನ ಎಂ.ಟಿ.ಪಲ್ಲಿ ಗ್ರಾಮದಲ್ಲಿ ಶ್ರೀ ಮಾತಾ ಮಾಣಿಕೇಶ್ವರಿ ಮಹಿಳಾ ಸ್ವ-ಸಹಾಯ ಸಂಘದ ವತಿಯಿಂದ ರಾಜ್ಯ ಸರ್ಕಾರದಿಂದ ಜನೆವರಿ 21ರಂದು ನಡೆಯುವ ನಿಜಶರಣ ಅಂಬಗೇರ ಚೌಡಯ್ಯನವರ ಜಯಂತತ್ಯೋತ್ಸವ ಅಂಗವಾಗಿ ಗ್ರಾಮದಲ್ಲಿರುವ ದ್ಯಾವಮ್ಮ ಆಯಿ ಆಂಜನೇಯ ಅಂಬಿಗರ ಚೌಡಯ್ಯ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.

ಸಮಾಜ ಭಾಂದವರು ತಮ್ಮ ಮಕ್ಕಳಿಗೆ ಬಾಲ್ಯ ವಿವಾಹ ಮಾಡುವುದನ್ನು ನಿಲ್ಲಿಸಬೇಕೆ. ಬಾಲ್ಯ ವಿವಾಹ ಒಂದು ದೊಡ್ಡ ಪೀಡಗು ಇದನ್ನು ತೊಲಗಿಸಲು ನಿವೇಲ್ಲಾ ಜಾಗೃತರಾಗಿ, ಬಾಲ್ಯ ವಿವಾಹ ಆಗದಂತೆ ಮುಂಜಾಗೃತಿ ವಹಿಸಿಕೊಳ್ಳಬೇಕು. ಯಾಕೆಂದರೆ ಬಾಲ್ಯ ವಿವಾಹ ಮಾಡುವದರಿಂದ ಕಾನೂನಿನ ನೇಮಗಳನ್ನು ಮೀರಿ ಹೋಗುವದರ ಜೊತೆಗೆ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವುದರ ಜೊತೆಗೆ ಮುಂದಿನ ದಿನಗಳಲ್ಲಿ ವಧು-ವರರಗೆ ರಕ್ತ ಹಿನತೆ ಆರೋಗ್ಯದಲ್ಲಿ ಏರುಪೇರು, ಆಗುವ ಸಂಬವ ಹೆಚ್ಚಾಗುತ್ತವೆ.


ಆದ ಕಾರಣ ಬಾಲ್ಯ ವಿವಾಹ ಗಳಿಗೆ ಪ್ರತಿಯೊಬ್ಬರು ನಿಲ್ಲುಸುವದರ ಜೊತೆಗೆ ಕಾನೂನಿ ನಿಮಗಳನ್ನು ಪಾಲಿಸಿ ಮಕ್ಕಳನ್ನು ಶಿಕ್ಷಣದಿಂದ ಅರ್ಧಕ್ಕೆ ನಿಲ್ಲುಸುವದನ್ನು ಬಿಟ್ಟು ಪೂರ್ತಿ ಪ್ರಮಾಣದ ಶಿಕ್ಷಣವನ್ನು ಕೊಡಿಸಿಲು ತಾವೇಲ್ಲರೂ ಪಣ ತೊಡಬೇಕೆಂದು ಹೇಳಿದರು

ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಸಮಾಜ ಮುಖ್ಯವಾಹಿನಿಗೆ ಬರಲು ಎಲ್ಲರೂ ಶ್ರಮಿಸಬೇಕೆಂದು ಕಿವಿಮಾತು ಹೇಳಿದರು.

ಈ ವರ್ಷ ತಾತಳಗೇರಾ ಗ್ರಾಮದ ಗುರುಮಠಕಲ್ ತಾಲ್ಲೂಕಿನ ಎಂ.ಟಿ.ಪಲ್ಲಿ ಗ್ರಾಮದಲ್ಲಿ ದ್ಯಾವಮ್ಮ ಆಯಿ ಆಂಜನೇಯ ಅಂಬಿಗರ ಚೌಡಯ್ಯ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ಕೋಲಿ ಜನಜಾಗೃತಿ ಅಭಿಯಾನ ಈ ಗ್ರಾಮದಿಂದ ಮುಕ್ತಾಯಗೊಳ್ಳಿಸಲಾಯಿತು.

ಈ ವೇಳೆ ಮಲ್ಲೇಶಿ, ಶ್ರೀನಿವಾಸರಡ್ಡಿ, ದೇವಪ್ಪ, ಹಣಮಂತ, ಬುಗ್ಗಪ್ಪ, ಯಲ್ಲಪ್ಪ, ಹುಸೇನಪ್ಪ, ನಾಗಪ್ಪ, ಮಹೇಶ, ಕಾಂತಪ್ಪ, ಅನೀಲಕುಮಾರ, ಶರಣಪ್ಪ, ಶಂಕರ, ಮಹಾದೇವ, ಬಸವಂತ, ನಾಗರಾಜ, ಲಾಲಪ್ಪ, ಪರಶುರಾಮ, ಜಗದೀಶ, ದೇವಮ್ಮ, ಅಮೃತಮ್ಮ, ಲಾಲಮ್ಮ, ತಾಯಮ್ಮ, ಮಾಣಿಕೆಮ್ಮ, ನಾವಿತಮ್ಮ, ಪಾರ್ವತೆಮ್ಮ, ಹುಸೇನಮ್ಮ, ನರಸಮ್ಮ, ಚನ್ನಮ್ಮ, ಬಾಲಮ್ಮ, ಯಲ್ಲಮ್ಮ ಸೇರಿದಂತೆ ಅನೇಕರು ಉಪಸ್ಥತರಿಂದರು.

# ಮಾನವೀಯ ಮೌಲ್ಯಗಳ ಪ್ರತಿಪಾದಕ ಯೋಗಿ ವೇಮನ




ಜಗತ್ತು ಕಂಡ ಶ್ರೇಷ್ಠದಾರ್ಶನಿಕರಲ್ಲಿ ಮಹಾಯೋಗಿ ವೇಮನರೂಒಬ್ಬರು. ತತ್ವಜ್ಞಾನಿಯಾಗಿ, ಸಮಾಜಸುಧಾರಕರಾಗಿ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಮಹಾನ್ ಯೋಗಿ.

ಕನ್ನಡದ ಸರ್ವಜ್ಞನಂತೆ,ತಮಿಳಿನ ತಿರುವಳ್ಳವರಂತೆ ವೇಮನರುಸ್ವಾನುಭವ ಸಾರ್ವಭೌಮರಾಗಿ ಜನರಾಡುವ ಭಾಷೆಯಲ್ಲೇ ರಚಿಸಿದ ಪದ್ಯಗಳು ಮನುಕುಲದ ಅಮೂಲ್ಯ ರತ್ನಗಳು. ವಿಶ್ವಪ್ರೇಮಿಯಾಗಿದ್ದ ವೇಮನರದು ದೇಶ, ಭಾಷೆ, ಮತ ಭೇದಗಳ ಸಂಕುಚಿತ ಆವರಣ ತೊರೆದ ಘನವ್ಯಕ್ತಿತ್ವ.

'ಊರ್ವಿ ವಾಸಿಗೆಲ್ಲ ಒಂದೇ ತಾಟನಿಟ್ಟು, ಸ್ನೇಹವರಳಿಸಿ, ಕುಲಭಾವವಳಿಸಿ, ಶಿರದ ಮೇಲೆ ಕರವಿಟ್ಟು ಉಣ ಹೇಳಿರೋ, ವಿಶ್ವದಾಭಿರಾಮ ಕೇಳೋ ವೇಮ' ಎನ್ನುವ ಪದ್ಯವೇ ಸಾರುತ್ತದೆ ವೇಮನರು ವಿಶ್ವಪ್ರೇಮಿ ಹಾಗೂ ಮಾನವ ಧರ್ಮವನ್ನು ಎತ್ತಿಹಿಡಿದವರು ಎಂದು.

ವೇಮನರ ಪದ್ಯಗಳು ಮನುಕುಲಕ್ಕೆ ಮಾರ್ಗದರ್ಶಕವಾಗಿದ್ದು,ಅನುಭಾವಸಾರವಾಗಿವೆ. ಸುಲಲಿತವಾಗಿ ಓದಬಲ್ಲವುಗಳಾಗಿದ್ದು, ಅವುಗಳಲ್ಲಿನ ಅರ್ಥವನ್ನೂ ಸಹ ಸಲೀಸಾಗಿ ತಿಳಿಯಬಹುದಾಗಿದೆ.ಅವುಗಳಲ್ಲಿಸಮದರ್ಶಿತ್ವವನ್ನು ಕಾಣಬಹುದಾಗಿದೆ.

ಅರ್ಥವಿಲ್ಲದ ಆಚರಣೆ, ಕಂದಾಚಾರ, ಮೂಢನಂಬಿಕೆ, ಜಾತಿಯ ವ್ಯವಸ್ಥೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದವೇಮನರು, ಮನುಕುಲಕ್ಕೆ ಜಾಗೃತಿ ಮೂಡಿಸಿ ಸತ್ಯದ ಬೆಳಕನ್ನು ತೋರಿದವರು. ಅಸಹಾಯಕರ ಚಿಂತಕರಾಗಿ ಕರ್ಮಯೋಗಿ ಎನಿಸಿಕೊಂಡವರು.

ಕಾಯಕ ನಿಷ್ಠೆ, ಭಕ್ತಿ,ಗೌರವದಿಂದ ನಡೆದುಕೊಂಡು, ಸಂಸಾರದಲ್ಲಿದ್ದರೂ ಇಲ್ಲದಂತೆಜೀವನಸಾಗಿಸಿ ಪಾರಮಾರ್ಥವನ್ನು ಕಂಡುಕೊಳ್ಳಬೇಕೆಂದು ವೇಮನರು ಹೇಳುತ್ತಾರೆ. ಸತ್ಯವನ್ನುನಿರ್ಭೀತಿಯಿಂದ ಸಾರಿದ ವೇಮನರು, ಯಾರೊಬ್ಬರ ಪ್ರೀತಿಗಾಗಲಿ, ತಾನೇ ಕವಿಯಾಗಿ ಹೆಸರು ಮಾಡಬೇಕು ಎಂಬಾಗಲಿ ಪದ್ಯಗಳನ್ನು ರಚಿಸಿದವರಲ್ಲ. ಸಮಾಜದ ಓರೆ–ಕೋರೆಗಳನ್ನುತಿದ್ದಲು ಜಾತಿ, ಮತ, ಪಂಥಗಳ ಭೇದಗಳನ್ನು ಕಿತ್ತೆಸೆದು ಮನುಷ್ಯ ಜಾತಿ ಒಂದೇ ಎಂಬುದನ್ನುಸಾರಲು ಪದ್ಯ ರಚಿಸಿದರು.

ವೇಮನರ ಪದ್ಯಗಳಲ್ಲಿ ಮಾನವ ಕುಲದ ಜೀವನ ದರ್ಶನವೇ ಅಡಗಿದೆ. ಅವರ ಸಂದೇಶಗಳು ಜಗತ್ತಿಗೆ ದಾರಿದೀಪಗಳಾಗಿವೆ. ಜ.19 ರಂದು ವೇಮನ ಯೋಗಿಯ 613 ನೇ ಜಯಂತ್ಯೋತ್ಸವ ನಡೆಯಲಿದ್ದು,ಅವರು ನೀಡಿದ ಶಾಂತಿ, ಸೌಹಾರ್ದತೆ, ಸಮಭಾವ ಸಂದೇಶದ ಪರಿಮಳವನ್ನು ಬದುಕಿಗೆ ಪಸರಿಸಿಕೊಂಡರೆ ನಮ್ಮಗಳ ಬದುಕು ಸುಂದರವಾಗುತ್ತದೆ.

**ಪಾಂಡುರಂಗ ಬಾಳಕ್ಕನವರ**
**ಬೆನಕಟ್ಟಿ**

# 'ಎಟಿಎಂ' ಹಣ ದರೋಡೆ : ಮೃತ ಸಿಬ್ಬಂದಿ ಕುಟುಂಬಕ್ಕೆ 18 ಲಕ್ಷ ರೂ. ಪರಿಹಾರ ಘೋಷಣೆ.!

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 18 : ಎಸ.ಬಿ.ಐ ಬ್ಯಾಂಕ್ ಎಟಿಎಂ ದರೋಡೆ ದಾಳಿಯಲ್ಲಿಹತ್ಯೆಗೀಡಾದಭದ್ರತಾ ಸಿಬ್ಬಂದಿ ಗಿರಿ ವೆಂಕಟೇಶ್ ಅವರ ಬೇಮಳಖೇಡ್ ಮನೆಗೆ ಸಚಿವ ಈಶ್ವರ್ ಖಂಡ್ರೆ ಭೇಟಿ ನೀಡಿದ್ದು, ಒಟ್ಟು 18 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಸಚಿವರು, ಮೃತರ ಕುಟುಂಬಕ್ಕೆ ಸರ್ಕಾರದಿಂದ ಸಮಗ್ರಪರಿಹಾರ ಒದಗಿಸಲು ಬದ್ಧವಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ 8 ಲಕ್ಷ ಪರಿಹಾರ ಮತ್ತು ಹೆಚ್ಚುವರಿಯಾಗಿ 10 ಲಕ್ಷ, ಪಿಂಚಣಿ ಹಾಗೂ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡುವ ಸಂಬಂಧ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಕ್ರಮ ಕೈಗೊಳ್ಳಲಾಗುವದು ಎಂದು ತಿಳಿಸಿದ್ದಾರೆ.

ಸದ್ಯಕ್ಕೆ, ತಾತ್ಕಾಲಿಕವಾಗಿ ಕುಟುಂಬದವರಿಗೆ ಉದ್ಯೋಗ ನೀಡುವಂತೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ದುರಂತಕ್ಕೆ ಕಾರಣವಾದ ದುಷ್ಕರ್ಮಿಗಳನ್ನು ಶೀಘ್ರವಾಗಿ ಪತ್ತೆಹಚ್ಚಿ ಕಠಿಣ ಶಿಕ್ಷೆಗೆ ಒಳಪಡಿಸುವುದಾಗಿ ತಿಳಿಸಿ, ಕುಟುಂಬದ ನೋವಿನಲ್ಲಿ ಸರ್ಕಾರ ಮತ್ತು ತಾವೂ ಕೂಡ ಸದಾ ಜೊತೆಯಲ್ಲಿದ್ದೇವೆ ಎಂದು ಭರವಸೆ ನೀಡಿದ್ದಾರೆ.

ಬೀದರ್ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ



ಹೈದ್ರಾಬಾದ್ ನ ಕೇರ್ ಆಸ್ಪತ್ರೆಗೆ ನಿನ್ನೆ ರಾತ್ರಿ 11 ಗಂಟೆ ಸುಮಾರಿನಲ್ಲಿ ಭೇಟಿ ನೀಡಿ, ಬೀದರ್ ನಲ್ಲಿ ನಿನ್ನೆ ಎ.ಟಿ.ಎಂ. ದರೋಡೆ ವೇಳೆ ಗುಂಡೇಟಿನಿಂದಗಾಯಗೊಂಡು ಚಿಕಿತ್ಸೆಪಡೆಯುತ್ತಿರುವ ಸಿಬ್ಬಂದಿ ಶಿವಕುಮಾರ್ ಆರೋಗ್ಯ ವಿಚಾರಿಸಿದರು. ಶಿವಕುಮಾರ್ ಕುಟುಂಬದವರಿಗೆ ಧೈರ್ಯ ಹೇಳಿದ ಅವರು, ಶಿವಕುಮಾರ್ ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದರು. ನಂತರ, ವೈದ್ಯರೊಂದಿಗೆ ಸಮಾಲೋಚಿಸಿದ ಸಚಿವರು ಎಲ್ಲ ಅಗತ್ಯ ಚಿಕಿತ್ಸೆ ನೀಡುವಂತೆ ಮನವಿ ಮಾಡಿದರು.

# ರಾಜ್ಯ 5ನೇ ಹಣಕಾಸು ಆಯೋಗದ ಸಭೆ




ಮಲ್ಲಮ್ಮ ನುಡಿ ವಾರ್ತೆ

ಬೀದರ:ಜ.18: ರಾಜ್ಯ 5ನೇ ಹಣಕಾಸು ಆಯೋಗದ ಸಭೆಯು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿಜರುಗಿಸಲಾಯಿತು. ಸಭೆಗೆ ಆಗಮಿಸಿದ ರಾಜ್ಯ 5ನೇ ಹಣಕಾಸು ಆಯೋಗದ ಅಧ್ಯಕ್ಷರು ಡಾ. ಸಿ. ನಾರಾಯಣಸ್ವಾಮಿ ಅವರು ಮಾತನಾಡಿ 5ನೇ ಹಣಕಾಸು ಆಯೋಗದ ಸ್ಥಿತಿಗತಿಯ ಬಗ್ಗೆ ವಿವರಿಸಿದರು.

ತದನಂತರಗ್ರಾಮೀಣಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಗೆ ಸಂಬಂಧಿಸಿದಂತೆ 15ನೇ ಹಣಕಾಸು, ಲಿಂಕ್ ಡಾಕುಮೆಂಟ್, ರಾಜ್ಯ ಹಣಕಾಸು ಆಯೋಗದ ಪ್ರಗತಿ ಪರಿಶೀಲಿಸಿದರು. ಅಲ್ಲದೇ ಸದರಿಯವರು ಬೀದರ ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿಗಳಕರವಸೂಲಿಯು ಗಣನೀಯವಾಗಿ ಪ್ರಗತಿ ಸಾಧಿಸಿದೆ ಎಂದು ಸಭೆಯ ಗಮನಕ್ಕೆ ತಂದರು. ಅದಲ್ಲದೇ ಗ್ರಾಮ ಪಂಚಾಯತಿಯ ಕರ ವಸೂಲಾತಿಯಲ್ಲಿ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ಅಭಿಯಾನ ಜರುಗಿಸಿರುವುದನ್ನು ಅಧ್ಯಕ್ಷರು ಶ್ಲಾಘಿಸಿದರು.

ಆಯೋಗವು ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಗತಿ ಬಗ್ಗೆ ಚರ್ಚಿಸಿದರು. ಯೋಜನಾ ನಿರ್ದೇಶಕರಾದ ಮೋತಿಲಾಲ ಅವರು ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿ ಹಾಗೂ ಯೋಜನೆ ಪ್ರಗತಿಯ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಅಧ್ಯಕ್ಷರು ಮಾತನಾಡಿ ಬೀದರ ಜಿಲ್ಲೆಯ ನೀರಿನ ಕರ ವಸೂಲಾತಿ ತುಂಬಾ ಕಡಿಮೆಯಾಗಿದೆಯೆಂದು ತಿಳಿಸಿದರು. ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಸೂಕ್ತಕ್ರಮ ಜರುಗಿಸಬೇಕೆಂದು ಸೂಚಿಸಿದರು.

ಸಭೆಯ ಅಧ್ಯಕ್ಷರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಗಿರೀಶ ದಿಲೀಪ್ ಬದೋಲೆ ಅವರು ಸ್ವಾಗತಿಸಿ, ಮಾತನಾಡಿದರು. ಮುಖ್ಯಯೋಜನಾಧಿಕಾರಿಗಳು ಜಿಲ್ಲೆಯ ಸಾಮಾನ್ಯ ಮಾಹಿತಿ ಹಾಗೂ ಜಿಲ್ಲಾ ಪಂಚಾಯತನ ವಿವಿಧ ಯೋಜನೆಗಳ ಬಗ್ಗೆ ಸ್ವವಿವರವಾಗಿ ವಿವರಿಸಿದರು.

ಈ ಸಭೆಯಲ್ಲಿ ಮೊಹಮದ್ ಸನಾವುಲ್ಲಾ ಭಾ.ಆ.ಸೇ. (ನಿವೃತ್ತ) ಸದಸ್ಯರು 5ನೇ ರಾಜ್ಯ ಹಣಕಾಸು ಆಯೋಗದ, ಆರ್. ಎಸ್. ಫೋಂಡೆ ಸದಸ್ಯರು 5ನೇ ರಾಜ್ಯ ಹಣಕಾಸು ಆಯೋಗದ, ಎಂ. ಕೆ. ಕೆಂಪೇಗೌಡ ಸಮಾಲೋಚಕರು 5ನೇ ರಾಜ್ಯ ಹಣಕಾಸು ಆಯೋಗದ, ಸಿ.ಜೆ. ಸುಪ್ರಸನ್ನಸಮಾಲೋಚಕರು 5ನೇ ರಾಜ್ಯ ಹಣಕಾಸು ಆಯೋಗದ, ಕೆ. ಯಾಲಕ್ಕಿಗೌಡ ಅಧ್ಯಕ್ಷರು ಆಪ್ತಕಾರ್ಯದರ್ಶಿ 5ನೇ ರಾಜ್ಯ ಹಣಕಾಸು ಆಯೋಗದವರು, ಉಪಕಾರ್ಯದರ್ಶಿಗಳು,ಯೋಜನಾ ನಿರ್ದೇಶಕರು, ತಾಲೂಕಿನ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು,ಜಿಲ್ಲಾಪಂಚಾಯತ ಬೀದರ ಹಾಗೂ ಇತರರು ಉಪಸ್ಥಿತರಿದ್ದರು.

# ಜಲಸಂಗಿಯಲ್ಲಿ ನೆಲಕ್ಕೆ ಬಿದ್ದ ಟಿಐಎಫ್ಆರ್ ಸಂಸ್ಥೆಯ ಏರ್ ಬಲೂನ್



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.18:ಹುಮನಾಬಾದ ತಾಲ್ಲೂಕಿನಜಲಸಂಗಿಗ್ರಾಮದಲ್ಲಿ ಶನಿವಾರ ಬೃಹತ್ ಗಾತ್ರದ ಏರ್ ಬಲೂನ್ ಬಿದ್ದಿದ್ದು, ಅದನ್ನು ಕಂಡು ಕೆಲಕಾಲ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದರು.

ಜಲಸಂಗಿ ಗ್ರಾಮದ ಬೇವಿನ ಮರದ ಮೇಲೆ ಬಲೂನ್ ಬಿದ್ದಿದೆ. ದೊಡ್ಡ ಗಾತ್ರದ ಚಕ್ರಗಳು ಹಾಗೂ ಮಶೀನ್ ಅದಕ್ಕೆ ಅಳವಡಿಸಲಾಗಿತ್ತು.

ವಿಷಯ ತಿಳಿದು ಗ್ರಾಮಸ್ಥರು ನೆರೆದಿದ್ದರು. ಬಳಿಕ ಪೊಲೀಸರು ಸ್ಥಳಕ್ಕಾಗಮಿಸಿದರು.

'ಹೈದರಾಬಾದ್‌ನ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್' (ಟಿಐಎಫ್‌ಆರ್) ಸಂಸ್ಥೆಗೆ ಸೇರಿದ ಏರ್ ಬಲೂನ್ ಇದಾಗಿದೆ. ಹವಾಮಾನ ಅಧ್ಯಯನಕ್ಕಾಗಿ ಏರ್ ಬಲೂನ್ ಬಿಡಲಾಗಿತ್ತು. ತಾಂತ್ರಿಕ ಕಾರಣದಿಂದ ಕೆಳಗೆ ಬಿದ್ದಿದೆ. ಯಾರೂ ಆತಂಕಪಡುವ ಅಗತ್ಯವಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

# ಸಾವಿನಲ್ಲೂ ಸಾರ್ಥಕತೆ ಮೆರೆದ ಕಲ್ಲೇಶ್ವರ ಗೌಡ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.18:ತಾಲೂಕಿನಡಂಬ್ರಳ್ಳಿ ಗ್ರಾಮದ ಕಲ್ಲೇಶ್ವರಗೌಡ ತಂದೆ ಸಿದ್ದನಗೌಡ ಯಲ್ಲನಗೌಡ್ರು(79) 17/01/25 ರ ರಾತ್ರಿ 8. 30ಕ್ಕೆ ನಿಧನರಾದರು.

ಶ್ರೀಯುತರುಕೊಪ್ಪಳದಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಗಳ ಸಮಾಜಮುಖಿ ಕಾರ್ಯಗಳ ಪ್ರಭಾವಕ್ಕೊಳಗಾಗಿ, ಕಣ್ಣು ಮತ್ತು ದೇಹವು ಮಣ್ಣಲ್ಲಿ ಮಣ್ಣಾಗಿ ಹೋಗುವ ಬದಲು ನಾಲ್ಕು ಜನರಿಗೆ(ಸಂಶೋಧನಾ ವಿದ್ಯಾರ್ಥಿಗಳಿಗೆ)ಉಪಯೋಗವಾಗಲಿ ಎಂದರಿತು ತಮ್ಮ ದೇಹವನ್ನುಶ್ರೀ ಗವಿಸಿದ್ದೇಶ್ವರ ಆಯುರ್ವೇದಿಕ್



ಮೆಡಿಕಲ್ ಕಾಲೇಜಿಗೆ ದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಮೃತರಿಗೆ ಮೂವರು ಸಹೋದರಿಯರು,ಓರ್ವ ತಮ್ಮ, ನಾಲ್ಕು ಪುತ್ರರು,ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

ಕೊಪ್ಪಳದ ಕಿಮ್ಸ್ ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ 9:00 ರಿಂದ 12:00 ಗಂಟೆಯವರೆಗೆ ಕುಟುಂಬದ ಆಪ್ತರಿಗೆ ಮಾತ್ರ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

# ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಾಂಗದ ಪಾತ್ರ ಮುಖ್ಯ : ನ್ಯಾ.ಸಂದೇಶ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.18:ಉತ್ತಮವಾದ ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಾಂಗದ ಕೊಡುಗೆ ಬಹಳ ಮುಖ್ಯವಾಗಿದೆ ಎಂದು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಚ್.ಪಿ.ಸಂದೇಶ ಹೇಳಿದರು.

ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶನಿವಾರ ಜಿಲ್ಲಾ ನ್ಯಾಯಾಂಗ,ಲೋಕೋಪಯೋಗಿ ಇಲಾಖೆ ಹಾಗೂ ವಕೀಲರ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡ ನೂತನವಾಗಿ ನಿರ್ಮಿಸುತ್ತಿರುವ ಹೆಚ್ಚುವರಿ ನ್ಯಾಯಾಲಯಗಳ ಕಟ್ಟಡ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವಗಟ್ಟಿಗೊಳಿಸಲು ಹಾಗೂ ಪ್ರತಿಯೊಬ್ಬರಿಗೂ ಸಮಬಾಳು, ಸಮಪಾಲು ಸಿಗಬೇಕಾದರೆ ನ್ಯಾಯಾಂಗ ಕ್ರೀಯಾಶೀಲವಾಗಿ ಕೆಲಸ ಮಾಡಿದಾಗ ಮಾತ್ರ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಪ್ರಜೆಯು ಕಾನೂನುಗಳನ್ನುಗೌರವಿಸುವ ಕಾರ್ಯ ಮಾಡಿದಾಗ ಮಾತ್ರ ಸದೃಡ ಸಮಾಜ ನಿರ್ಮಾಣ ಮಾಡಲು ಸಾಧ್ಯವೆಂದರು.

ಆಡಳಿತ ವ್ಯವಸ್ಥೆಯಲ್ಲಿ ಕೇವಲ ನ್ಯಾಯಾಂಗ ಉತ್ತಮವಾಗಿ ಕೆಲಸ ಮಾಡಿದರೆ ಸಾಲದು ಕಾರ್ಯಾಂಗ ಮತ್ತು ಶಾಸಕಾಂಗ ಸಹ ಮಾಡಬೇಕು. ಪ್ರತಿಯೊಂದು ಕಾರ್ಯದಲ್ಲಿ ಎಲ್ಲರನ್ನು ಜೊತೆಗೆ ಕರೆದುಕೊಂಡು ಹೋಗುವ ಕಾರ್ಯ ಮಾಡಿದಾಗ ಸಮಾಜಮುಖಿ ಕಾರ್ಯ ಮಾಡಿದಂಗಾಗುತ್ತದೆ. ಇಲ್ಲವಾದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಂಡಿಲ್ಲ ಎಂದಾಗುತ್ತದೆ. ಎಲ್ಲರಿಗೂ ಸಮಾನವಾದ ಅವಕಾಶ, ದುಡಿಮೆಗೆ ಅವಕಾಶ ಕಟ್ಟಿಕೊಟ್ಟಾಗ ಮಾತ್ರ ಸುಂದರ ಸಮಾಜ



ನಿರ್ಮಿಸಲು ಸಾಧ್ಯವಾಗುತ್ತದೆ ಎಂದರು.

ಹೆಚ್ಚುವರಿಯಾಗಿ ನ್ಯಾಯಾಲಯದ ಕಟ್ಟಡವನ್ನು 17.60ಕೋಟಿವೆಚ್ಚದಲ್ಲಿನಿರ್ಮಾಣ ಮಾಡಲಾಗುತ್ತಿದೆ. ಈ ಕಟ್ಟಡದ ಕಾಮಗಾರಿ ಗುಣಮಟ್ಟದಿಂದ ನಿರ್ಮಾಣವಾಗಬೇಕಾದರೆ. ಕೇವಲ ನ್ಯಾಯಾಧೀಶರ, ವಕೀಲರ ಜವಾಬ್ದಾರಿ ಆಗಿಲ್ಲ. ಎಲ್ಲರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಹಂತದಲ್ಲಿ ಕಾಮಗಾರಿ ಗುಣಮಟ್ಟದಲ್ಲಿರುವ ಬಗ್ಗೆ ಪರಿಶೀಲನೆ ಅಗತ್ಯವಾಗಿದೆ. ಉತ್ತಮ ಕಟ್ಟಡ ನಿರ್ಮಾಣವಾಗಿ ಜನರಿಗೆ ಉತ್ತಮ ನ್ಯಾಯ ದೊರಕಿಸಿಕೊಡುವ ಕಾರ್ಯವಾಗಬೇಕೆಂದು ತಿಳಿಸಿದರು.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ರವಿ ಹೊಸಮನಿ ಮಾತನಾಡಿ, ನ್ಯಾಯಾಲಯದಲ್ಲಿಬೇಗನೇಪ್ರಕರಣ ಇತ್ಯರ್ಥವಾಗುವದಿಲ್ಲವೆಂಬ ಜನ ಸಾಮಾನ್ಯರು ಹೇಳುತ್ತಿರುವುದನ್ನು ಕೇಳುತ್ತಿದ್ದು, ನ್ಯಾಯಾಂಗ ವ್ಯವಸ್ಥೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿನ್ಯಾಯಾಲಯಗಳು ಇಲ್ಲ. ಆದರೂ ಸಹ ಸಾಮರ್ಥ್ಯ ಮೀರಿ ನ್ಯಾಯಾಧೀಶರು ಕೆಲಸ ಮಾಡಲಾಗುತ್ತಿದ್ದಾರೆ ಎಂದರು. ಹಿರಿಯನ್ಯಾಯಾಧೀಶರು ಕಿರಿಯ ನ್ಯಾಯಾಧೀಶರನ್ನುಪೋಷಿಸುವ ಮೂಲಕ ಉತ್ತಮ ನ್ಯಾಯ ಒದಗಿಸುವ ಕೆಲಸವಾಗಲಿ ಎಂದರು.

ಉಚ್ಚ ನ್ಯಾಯಾಲಯದ ಇನ್ಸೋರ್ವ ನ್ಯಾಯಮೂರ್ತಿ ಹಂಚಾಟೆ ಸಂಜೀವಕುಮಾರ ಮಾತನಾಡಿ, ನಮ್ಮ ದೇಶದಲ್ಲಿ ಲಕ್ಷ ಜನರಿಗೆ13ನ್ಯಾಯಾಲಯಗಳಿದ್ದರೆ, ಸದ್ಯ 17 ನ್ಯಾಯಾಲಯಗಳಿವೆ. ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಲಕ್ಷ ಜನರಿಗೆ 50 ನ್ಯಾಯಾಲಯಗಳು ಇರಬೇಕು. ಆದರೆ ಆ ಮಟ್ಟಕ್ಕೆ ಹೋಗಬೇಕಾದರೆ ನ್ಯಾಯಾಲಯಗಳಿಗೆ ಒದಗಿಸುವ ಮೂಲಭೂತ ಸೌಲಭ್ಯ ಹೆಚ್ಚಾದಾಗ ಮಾತ್ರ ತರ್ತು ಪ್ರಕರಣ ಇತ್ಯರ್ಥಗೊಳಿಸಲು ಸಾಧ್ಯವಾಗುತ್ತದೆ. ಕೇವಲ ಅಭಿವೃದ್ಧಿ ಬೆಂಗಳೂರಿನಲ್ಲಿ ಆಗದೆ ಉತ್ತರ ಕರ್ನಾಟಕ ಭಾಗದಲ್ಲಿ ಆಗಬೇಕಿದೆ. ವಕೀಲರ ಅಕಾಡೆಮಿ ಉತ್ತರ ಕರ್ನಾಟಕದ ಭಾಗದಲ್ಲಿ ಮಾಡಿದಾಗ ವಕೀಲರಿಗೆ ಅನುಕೂಲವಾಗಲಿದೆ ಎಂದರು.

ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವಾಯ್.ಮೇಟಿ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ,ಹನಮಂತ ನಿರಾಣಿ ಮಾತನಾಡಿ, ಈ ಭಾಗದದ ಮುಳುಗಡೆ ಸಂತ್ರಸ್ತರಿಗೆ ಸಂಬಂಧಿಸಿದ ಪ್ರಕರಣಗಳು ಬಹಳಷ್ಟು ಇದ್ದು, ನೂತನ ನ್ಯಾಯಾಲಯದ ಕಟ್ಟಡ ನಿಗದಿತ ಅವಧಿಯಲ್ಲಿ ಪೂರ್ಣಗೊಂಡು ಬೇಗನೆ ಪ್ರಕರಣಗಳು ಇತ್ಯರ್ಥಗೊಳ್ಳುವಂತಾಗಲಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಜಿಲ್ಲಾ ಮತ್ತು ಸತ್ರನ್ಯಾಯಾಧೀಶ ಎನ್.ವಿ.ವಿಜಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ವಕೀಲರ ಸಂಘದ ಸದಸ್ಯ ಎಸ್.ಎಸ್.ಮಿಟ್ಟಲಕೋಡ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಮೇಶ ಬದ್ನೂರ, ಕಾರ್ಯದರ್ಶಿ ಪ್ರಶಾಂತ ನಾರಾಯಣಕರ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಕೆ.ದುರ್ಗಾದಾಸ ಸೇರಿದಂತೆ ಇತರರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಅತಿಥಿಗಳನ್ನು ಸಾಂಸ್ಕೃತಿಕ ಕಲಾತಂಡಗಳ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.